ಹೊರನಾಡ ಚಿಲುಮೆ

ಕಾಂಗರುನಾಡಿನ ಕನ್ನಡಿಗರಿಂದ ವಿಶ್ವ ಕನ್ನಡಿಗರ ಹೃದಯಕ್ಕೆ

ಆಸ್ಟ್ರೇಲಿಯಾದ ಮೊಟ್ಟಮೊದಲ ಕನ್ನಡ ಇ-ಮಾಸಪತ್ರಿಕೆ
Chilume Circulated in and around 10 countries

ಸಂಪುಟ ೩, ಸಂಚಿಕೆ ೧, ಜೂನ್ ೨೦೧೫

Find us on: facebook

ಹೊರನಾಡ ಚಿಲುಮೆ ಇ-ಮಾಸ ಪತ್ರಿಕೆಯ ಓದುಗರಿಗೆಂದು ತೆರೆಯಲಾಗಿರುವ ಫೇಸ್ಬುಕ್ ಗುಂಪು
ಸೇರಿಕೊಳ್ಳಲು ಕೆಳಗಿನ ಲಿಂಕ್ ಕ್ಲಿಕ್ ಮಾಡಿ

JOIN CHILUME FACEBOOK GROUP (You have to be logged in to facebook to join)

ಚಿಲುಮೆಯ ಒಳಗೆ

ಸಂಪಾದಕೀಯ ... ಪು. ೧
ಬೇಸಿಗೆಯ ಕ್ರಿಕೆಟ್ – ಲೇಖನ ... ಪು. ೨

ಚಿಲುಮೆಯ ಒಳಗೆ

ವಿಚಾರ ವಿಹಾರ ... ಪು. ೩
ರಾಂ ರಾಮ! ಹಾಸ್ಯ ... ಪು. ೪

ಚಿಲುಮೆಯ ಒಳಗೆ

ಕಥಾಚಿಲುಮೆ, ರೆಸಿಪಿ ಕೊಡ್ತೀರಾ! ... ಪು. ೬
ಕಾವ್ಯ ಚಿಲುಮೆ, ಹಾಸ್ಯ ಚಿಲುಮೆ ... ಪು. ೮

ಚಿಲುಮೆಯ ಒಳಗೆ

ಪದ ಪುಂಜ/ರಂಗೋಲಿ ... ಪು. ೯
ಕರ್ನಾಟಕದ ರಾಜವಂಶಗಳು ... ಪು. ೧೦

ಚಿಲುಮೆಯ ಒಳಗೆ

ಹಾಸ್ಯ – ತಾಯಿ ಶಾಪು ... ಪು. ೧೪
ವಿಜ್ಞಾನ , ಅಲ್ಲಲ್ಲಿ ಏನೇನು ... ಪು. ೧೫

ಕನ್ನಡದ ಒಂದು ಕಾಯಕಕ್ಕೆ ಮನವಿ
ಪುಟ ೧೩

ಸಂಪಾದಕೀಯ

ಬದರಿ ತ್ಯಾಮಗೊಂಡ್ಲು

ಆತ್ಮೀಯ ಓದುಗರೇ, ಬರಹಗಾರರೇ ಮತ್ತು ಹಿತೈಷಿಗಳೇ,

ಹೊರನಾಡ ಚಿಲುಮೆಯ ಮೂರನೇ ಸಂಪುಟದ ಮೊದಲನೇ ಸಂಚಿಕೆಯಿದು. ಅಂದರೆ ಸತತ ಎರಡು ವರ್ಷಗಳ ಕಾಲ ನಿಮ್ಮ ಪ್ರೀತಿಯ ಆರೈಕೆಯಲ್ಲಿ ಬೆಳೆದ ಈ ಇ-ಪತ್ರಿಕೆಯು, ಈಗ ಮೂರನೇ ವರ್ಷಕ್ಕೆ ಕಾಲಿಟ್ಟಿದೆ. ಸಂಪಾದಕೀಯ ಸಮಿತಿಯ ಜೊತೆಗೆ ನಿಮ್ಮೆಲ್ಲರ ಸಹಕಾರದಿಂದ ಮಾತ್ರ ಈ ಪತ್ರಿಕೆಯು ವಿಕಸಿತವಾಗುತ್ತಿದೆ ಎಂದು ಮನಸಾರೆ ನೆನೆಯುತ್ತೇನೆ. ಅದಕ್ಕಾಗಿ ನಿಮಗೆಲ್ಲರಿಗೂ ನನ್ನ ಪ್ರೀತಿಯ ನಮಸ್ಕಾರಗಳು. ನಿಮ್ಮ ವಿಶ್ವಾಸ ಮತ್ತು ಸಹಯೋಗ ಸದಾ ಇದ್ದು, ಅದು ಈ ಪತ್ರಿಕೆಯನ್ನು ಸಲಹುವುದೆನ್ನುವ ನಿಚ್ಚಳ ನಂಬಿಕೆಯು ನನ್ನದು.

೩ನೇ ವರ್ಷ

ಎರಡು ವರ್ಷದ ಕಾಲದಲ್ಲಿ ಪ್ರಕಟವಾದ ಬರಹಗಳಿಗೆ ಓದುಗರಾಗಿ ನೀವು ಮೆಚ್ಚುಗೆಯ ಜೊತೆಗೆ ಟೀಕೆ, ಸಲಹೆಗಳನ್ನೂ ಕೊಟ್ಟಿದ್ದೀರಿ. ಇದು, ಪತ್ರಿಕೆಯ ನಾಡೀಮಿಡಿತವೆ ಸರಿ. ಹೊರನಾಡ ಚಿಲುಮೆಯು "ಕನ್ನಡದಲ್ಲಿ ಬರೆಯಬೇಕು ಎನ್ನುವ ಆಸಕ್ತಿ ತರಿಸುತ್ತಿದೆ" ಎಂದು ಹಲವಾರು ಓದುಗರು ಇಮೇಲ್ ಮೂಲಕ ತಿಳಿಸಿದ್ದೀರಿ. ಇದು ಚಿಲುಮೆ ತಂಡಕ್ಕೆ ಸ್ಫೂರ್ತಿ ಮತ್ತು ಸಾರ್ಥಕತೆ ತರುವ ಮಾತುಗಳು. ಇದಕ್ಕೆ ಧನ್ಯವಾದಗಳು.

ನಾವಾಡುವ ನುಡಿಯ ಜೊತೆಗೊಂದು ಅವಿನಾಭಾವ ಸಂಬಂಧವಿರುತ್ತದೆ. ಅದನ್ನು ನಾವೆಷ್ಟು ಬಳಸಿ, ಪೋಷಿಸುತ್ತೇವೆ ಎನ್ನುವುದರ ಮೂಲಕ ಅದನ್ನು ನಾವು ಎಷ್ಟು ಜೀವಂತವಾಗಿ ಇಟ್ಟಿರುತ್ತೇವೆ ಎಂಬುದು ತಿಳಿಯುತ್ತದೆ. "ಹೊರನಾಡ ಚಿಲುಮೆಯ" ಮೂಲಕ ಅಂತಹ ತಾಯ್ನುಡಿಯ ಬಳಕೆಯು ನಿರಂತರವಾಗಿದ್ದು, ನಿಮ್ಮೆಲ್ಲರ ಪಾತ್ರದಿಂದ ಸದಾ ಸ್ಫೂರ್ತಿಯ ಚಿಲುಮೆಯಾಗಿ ಚಿಮ್ಮುತ್ತಿರಲಿ ಎಂಬುದೇ ಈ ತಂಡದ ನಿಲುಮೆ. ನಮ್ಮ ನಿಮ್ಮ ಜೊತೆ ಕನ್ನಡದ ಜೊತೆ ... ▪

ಇದು ಹೊರನಾಡ ಚಿಲುಮೆಯ ೨೫ನೇ ಸಂಚಿಕೆ.

ಸಂಪಾದಕೀಯ ಸಮಿತಿಗೆ ಮತ್ತು ನಲ್ಮೆಯ ಕನ್ನಡವನ್ನು ಕಟ್ಟಿ, ಬೆಳೆಸಿ, ಪೋಷಿಸುವ ಎಲ್ಲರಿಗೂ ಧನ್ಯವಾದಗಳು.

ನಿಮ್ಮ ಸಹಕಾರವಿರಲಿ.

ಎರಡು ತಿಂಗಳ ಪ್ರಮುಖ ದಿನಗಳು

ಜೂನ್ ಶ್ರೀ ಮನ್ಮಥ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ/ಆಷಾಢ ಮಾಸ

01 ಸೋ - ಹುಣ್ಣಿಮೆ
02 ಮಂ - ಕಾರ ಹುಣ್ಣಿಮೆ,ವಟ ಸಾವಿತ್ರಿ ವ್ರತ
03 ಬು - ಷಬ್ ಎ ಬರಾತ್
05 ಶು - ಸಂಕಷ್ಟ ಚತುರ್ಥಿ
12 ಶು - ಯೋಗಿನೀ ಏಕಾದಶಿ
16 ಮಂ - ಮಣ್ಣೆತ್ತಿನ ಅಮಾವಾಸ್ಯೆ
17 ಬು - ಆಷಾಢ ಮಾಸ ಆರಂಭ
18 ಗು - ರಂಜಾನ್ ಪ್ರಾರಂಭ
21 ಭಾ - ಫಾದರ್ಸ್ ಡೇ
28 ಭಾ - ಏಕಾದಶಿ

ಜುಲೈ ಶ್ರೀ ಮನ್ಮಥ ನಾಮ ಸಂವತ್ಸರ, ಉತ್ತರಾಯಣ/ದಕ್ಷಿಣಾಯಣ, ಗ್ರೀಷ್ಮ ಋತು, ಆಷಾಢ/ನಿಜ ಆಷಾಢ ಮಾಸ

02 ಗು - ಹುಣ್ಣಿಮೆ
05 ಭಾ - ಸಂಕಷ್ಟ ಚತುರ್ಥಿ
14 ಮಂ - ಷಬ್ ಎ ಕ್ವಾದರ್
15 ಬು - ಅಮಾವಾಸ್ಯೆ
16 ಗು - ನಿಜ ಆಷಾಢ ಮಾಸ ಆರಂಭ
18 ಶ - ಕುತುಬ್ ಎ ರಂಜಾನ್
27 ಸೋ - ಏಕಾದಶಿ

ಎಲ್ಲೆಲ್ಲೂ ಕ್ರಿಕೆಟ್, ಕ್ರಿಕೆಟ್ ಸಂಭ್ರಮ ಅಂತೂ ಮುಗಿದೇ ಹೋಯಿತು. ಕಳೆದ ಅಕ್ಟೋಬರ್ ತಿಂಗಳಿನಿಂದ ಭಾರತ - ಆಸ್ಟ್ರೇಲಿಯಾ ದೇಶದ ಮೇಲೆ ಆಡಿದ ಟೆಸ್ಟ್ ಸರಣಿಯಲ್ಲೂ, ಕೊಹ್ಲಿ, ರಹಾನೆ ದಶಕ ಗಳಿಸಿದ್ದರೂ ಕೈಗೆ ಬಂದ ತುತ್ತು ಬಾಯಿಗಿಲ್ಲದ ಹಾಗೆ ಆಡಿಸೋತಿದ್ದು, ಸಿಡ್ನಿ ಟೆಸ್ಟ್ನಲ್ಲಿ ಶತಕಕ್ಕೇ ಹೆಸರು ಗಳಿಸಿದ್ದ ಹೊಸ ಆಟಗಾರ ಮಂಗಳೂರಿನ ರಾಹುಲ್ ಅಮೋಘ ಶತಕ ಗಳಿಸಿದ್ದರೂ ಇನ್ನುಳಿದವರ ಆಟ ಅಷ್ಟಕ್ಕಷ್ಟೇ ಆಗಿ ವರುಣನ ದಯೆಯಿಂದ ಡ್ರಾ ಆಗಿದ್ದೂ, ಎಲ್ಲ ಒಂದು ತರಹ ಸಂತೋಷ ಬೇಜಾರು ಆಗಿ, ಕ್ರಿಕೆಟ್ ಪ್ರೇಮಿಗಳಿಂದಲೂ, ಯಾವ ಆಟಗಾರ ಇರುವುದಿಲ್ಲವೋ ಅವರನ್ನು ಹಾಕಿಕೊಳ್ಳಬೇಕಾಗಿತ್ತು, ನಮ್ಮಲ್ಲಿ ಸರಿಯಾದ ಫಾಸ್ಟ್ ಬೌಲರ್ ಇಲ್ಲ ಎಂದು ಅವರವರ ತೃಪ್ತಿಗೆ ಇನ್ನೊಬ್ಬರ ಜೊತೆ ಸಂಭಾಷಣೆ ಹಂಚಿಕೊಳ್ಳುವುದು ಕೇಳಲು ಚೆನ್ನಾಗಿರುತ್ತಿತ್ತು. ಅದಕ್ಕೆ ಸರಿಯಾಗಿ ಏಕದಿನ ಸರಣಿಯಲ್ಲೂ ಇಂಗ್ಲೆಂಡ್ ಮೇಲೂ ಸೋತು, ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾನೇ ಫೈನಲ್ಸ್ಗೆ ಬಂದಿದ್ದು ಕಂಡು ಏಕಪ್ಪಾ ನಮ್ಮವರು ಇಲ್ಲಿಗೆ ಬಂದರು ಎಂದು ಅನ್ನಿಸಿಬಿಟ್ಟಿತ್ತು.

ಎಸ್.ಸಿ.ಜಿ ಟೆಸ್ಟ್ ಮ್ಯಾಚ್ನಲ್ಲಿ ಶಿಖರ್ ಧವನ್ ನನಗೆ ನಮ್ಮ ಟೀಮಿನ ಆಟಗಾರನೆಂದು ಗುರುತಿಸಲು ಬಹಳ ಕಷ್ಟವಾಯಿತು! ನಂತರ ನಮ್ಮ ಸ್ನೇಹಿತರು ಇವರು ಟೆಸ್ಟ್ ಆಟಗಾರನಲ್ಲ, ಓ.ಡಿ.ಐ ನವರೆಂದಿದ್ದರು. ಅದಕ್ಕೆ ಸರಿಯಾಗಿ ವರ್ಲ್ಡ್ ಕಪ್ ಸರಣಿಯಲ್ಲಿ ತುಂಬಾ ಚೆನ್ನಾಗಿ ಆಡಿ ರೆಕಾರ್ಡ್ ಮುರಿದು ಅದ್ಭುತ ಆಟಗಾರನೆನೆಸಿಕೊಂಡರು. ಏಕದಿನ ಸರಣಿ ಮುಗಿಯಿತೆಂದರೆ ವರ್ಷಗಳಿಂದ ಎದುರುನೋಡುತ್ತಿದ್ದ ವರ್ಲ್ಡ್ ಕಪ್ ಕ್ರಿಕೆಟ್ ಬಂದೇ ಬಿಟ್ಟಿತು. ಅದರಲ್ಲೂ 'ಎ' ಗ್ರೂಪ್ 'ಬಿ' ಗ್ರೂಪ್ ಪಟ್ಟಿಯನ್ನು ನೋಡಿ ಭಾರತ ಟೀಮಿಗೆ ಟ್ರೋಫಿ ಪಡೆಯುವ ಅವಕಾಶ ಚೆನ್ನಾಗಿದೆಯೆಂದು ಆಡಿದ್ದೇ ಆಡಿದ್ದು!! ಹಾಗೂ ನಿರೀಕ್ಷಿಸಿದ್ದಕ್ಕೆ ಎಡವಟ್ಟಾಗದೆ ಭಾರತ, ಪಾಕಿಸ್ಥಾನದ ಮೇಲೆ ಗೆದ್ದು ಖಚಿತಪಡಿಸಿದ್ದು ನಂತರ ಗೆಲುವಿನ ಹಾದಿಯಲ್ಲೇ ಬಂದಿದ್ದ ಸೌತಾಫ್ರಿಕಾ ನೀರಿಳಿಸಿ, ಎದುರಿಸಿ ಆಡಿದ ಮ್ಯಾಚ್ಗಳು ಅದ್ಭುತವಾಗಿದ್ದುವು. ನನಗೆ ಭಾರತ ಪಾಕಿಸ್ತಾನದ ಮೇಲೆ ಆಡಿದಾಗ 'ಕೊಹ್ಲಿ' ಕೊಟ್ಟ ಕ್ಯಾಚ್ ಹಿಡಿದುಬಿಟ್ಟಿದ್ದರೆ ಆಟದ ಮಜಾನೆ ಬೇರೆಯಾಗುತ್ತಿತ್ತು! ಅಂತ ಅನಿಸಿತು. ಅವರಿಗೆ ಜೀವದಾನ ಸಿಕ್ಕಿ ಭಾರತದವರಿಗೆ ಅದೃಷ್ಟ ಖುಲಾಯಿಸಿತೆನ್ನಿಸಿತು. ಭಾರತ ಟೀಮಿನಲ್ಲಿ ಮೊದಲು ಮೂರು ಶರ್ಮಗಳ ಹೆಸರು, ಇ.ಶ, ಮೋ.ಶ, ರೋ.ಶ. ನೋಡಲು ಚೆನ್ನಾಗಿತ್ತು.

ಮೊದಲ ಸುತ್ತಿನ ಮ್ಯಾಚ್ ಗಳಲ್ಲಿ ಭಾರತದ ಸುಮಾರು ಆಟಗಾರರು ಹಿಂದಿನ ಹೆಸರಾಂತ ಕ್ರಿಕೆಟ್ ದಿಗ್ಗಜರುಗಳ ರನ್ನುಗಳು, ವಿಕೆಟ್ಸ್, ರಿಕಾರ್ಡ್ ಮುರಿದ ಸಾಧನೆ ವಿಶೇಷವಾಗಿತ್ತು ಹಾಗೂ ಸೆಮಿಫೈನಲ್ಸ್ ವರೆಗೂ ಗೆದ್ದುಕೊಂಡೇ ಬಂದಿದ್ದು ಕ್ರಿಕೆಟ್ ಪ್ರೇಮಿಗಳೆಲ್ಲಾ ಆಗಲೇ ಕನಸು ಕಟ್ಟಿಕೊಳ್ಳುತ್ತಾ ಭಾರತ ಮೂರನೇ ಬಾರಿ ವರ್ಲ್ಡ್ ಕಪ್ ಗಿಟ್ಟಿಸುವರೆಂಬ ಆಸೆ ಮೂಡಿಸಿಕೊಂಡಿದ್ದರು. ಆದರೆ ಆದದ್ದೇ ಬೇರೆ!!

'ಎ' ಗ್ರೂಪ್ನಲ್ಲಂತೂ, ಆಫ್ಘಾನಿಸ್ಥಾನ್, ಸ್ಕಾಟ್ಲೆಂಡ್, ಬಾಂಗ್ಲಾದೇಶದವರುಗಳೆಲ್ಲಾ ಈಚೀಚೆಗೆ ಭಾಗವಹಿಸುತ್ತಿರುವ ಟೀಮುಗಳು. ಆದರೂ ಬಾಂಗ್ಲಾದೇಶದವರು ಮೊದಲ ಸುತ್ತಿನಲ್ಲೂ ಒಳ್ಳೆಯ ಪ್ರದರ್ಶನದ ಆಟವೇ ಆಡಿದರು. ಇನ್ನುಳಿದ ಟೀಮಿನವರಿಗೆ ಅವರ ದೇಶ ವರ್ಲ್ಡ್ ಕಪ್ನಲ್ಲಿ ಭಾಗವಹಿಸಿದ್ದ ಭಾಗ್ಯವಷ್ಟೆ!!

ಇನ್ನು ಗ್ರೂಪ್ 'ಬಿ'ನಲ್ಲಿ, ಐರ್ಲಂಡ್, ಜಿಂಬಾಬ್ವೆ, ಯುನೈಟೆಡ್ ಅರಬ್ ಎಮಿರೇಟ್ಸ್ ಸ್ಪರ್ಧೆಯಲ್ಲಿ ಹೆಸರಿಗೆ ಮಾತ್ರ ಭಾಗವಹಿಸಿದ್ದರು ಎನ್ನಬಹುದು. ಆದರೆ ಐರ್ಲಂಡ್ ಹೆಸರಾಂತ ವೆಸ್ಟಿಂಡೀಸ್ ನವರನ್ನು ಸೋಲಿಸಿ ಮುಂದೆ ತಮ್ಮ ಪಂದ್ಯಕ್ಕೆ ಒಳ್ಳೆಯ ಭವಿಷ್ಯವಿರುವುದನ್ನ ತೋರಿಸಿ ಹೋದರು. ಹಿಂದಿನ ವೆಸ್ಟ್ ಇಂಡೀಸ್ ಹೆಸರು ಉಳಿಸದೆ ಏಕೆ ಅಂತ ಕಳಪೆ ಆಟ ಆಡಿ ಹೋದರೋ ಗೊತ್ತಾಗಲಿಲ್ಲ! ಯಾರನ್ನು ಕೇಳಿದರೂ ಫೈನಲ್ಸ್ ಗೆ ಆಸ್ಟ್ರೇಲಿಯ ಮತ್ತು ಸೌತ್ ಆಫ್ರಿಕಾ ಅಂತಾನೇ ಹೇಳುತ್ತಿದ್ದರು ಆದರೆ ನಾನು ಮಾತ್ರ ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್ ಬರುವುದೆಂದು ನಿರ್ಧರಿಸಿಬಿಟ್ಟಿದ್ದೆ. ಅದರಂತೆಯೇ ಆಯಿತು. ಆದರೆ ನ್ಯೂಜಿಲೆಂಡ್ ಫೈನಲ್ಸ್ ದಿವಸದ ಆಟ ಅವರದಾಗಿಸಿಕೊಳ್ಳುವ ಸಾಧ್ಯವಾಗದೆ ಅವರಿಗೆ ವರ್ಲ್ಡ್ ಕಪ್ ಸಿಕ್ಕದೆ ಇದ್ದುದು ತುಂಬಾ ನಿರಾಶೆಯಾಯಿತು. ಆಸ್ಟ್ರೇಲಿಯ ಟೀಮಿನವರು ಮಾತ್ರ ಹೆಸರಾಂತ ಎಮ್.ಸಿ.ಜಿ. ನಲ್ಲಿ ಬಿಟ್ಟುಕೊಡದೆ ಎಷ್ಟೇ ರನ್ನುಗಳು ಎದುರಿಸಬೇಕಾಗಿದ್ದರೂ, ಪಂಗಡದಲ್ಲಿ ಒಳ್ಳೆಯ ಒಗ್ಗಟ್ಟು, ಭಾವೈಕ್ಯತೆ ಇದ್ದು ಎದುರಾಳಿಗಳನ್ನು ಬಗ್ಗುಬಡಿದು ತಮಗೇ ಜಯವೆನ್ನುವುದು ಸಾರ್ಥಕಪಡಿಸಿ ವರ್ಲ್ಡ್ ಕಪ್ ಅವರದಾಗಿಸಿಕೊಂಡಿದ್ದು ನಿಜಕ್ಕೂ ಹೆಮ್ಮೆಯನ್ನುಂಟು ಮಾಡಿತು.

ಭಾರತ, ಅಮೇರಿಕಾ ಮುಂತಾದ ಪ್ರದೇಶಗಳಿಂದಲೂ ಭಾರತಕ್ಕೆ ಸಪೋರ್ಟ್ ಮಾಡುವ ಸಲುವಾಗಿ ಅದೆಷ್ಟು ಕ್ರಿಕೆಟ್ ಪ್ರೇಮಿಗಳು ಉತ್ಸಾಹದಿಂದ ಮುಂಚೆಯೇ ಟಿಕೇಟು ಕೊಂಡುಕೊಂಡು, ಆಸ್ಟ್ರೇಲಿಯಾ, ನ್ಯೂಜಿಲೆಂಡ್ ದೇಶಗಳನ್ನು ನೋಡಿ, ಕ್ರಿಕೆಟ್ ಮ್ಯಾಚ್ಗಳನ್ನೂ ನೋಡಿ ಆನಂದಿಸುವ ಅನುಕೂಲವನ್ನು ಪಡೆದುಕೊಂಡರು, ಈ ನಿಟ್ಟಿನಲ್ಲಿ ಅನೇಕ ಏರ್ಲೈನ್ಸ್, ಟ್ರಾವೆಲ್ ಏಜೆಂಟ್ಸ್ ಒಳ್ಳೆಯ ಸೌಲಭ್ಯ ಒದಗಿಸಿ ಪ್ರಯಾಣಿಕರಿಗೆ ಸಹಾಯ ಮಾಡಿರುವರು. ಇಲ್ಲಿರುವ ಕ್ರಿಕೆಟ್ ಪ್ರೇಮಿಗಳೂ ಆನ್ ಲೈನ್ ನಲ್ಲಿ ಟಿಕೇಟು ಕೊಡುವುದು ಗೊತ್ತಾದ ತಕ್ಷಣವೇ ಟಿಕೆಟ್ಟುಗಳನ್ನು ಅವರದಾಗಿಸಿಕೊಂಡರು ಇನ್ನೂ ಕೆಲವರು ಕೊನೆಯ ಘಳಿಗೆಯವರೆಗೂ ಕಾದು, ಈಬೆಯಲ್ಲಿ ಫಜೀತಿ ಪಟ್ಟಿದ್ದೂ ಆಯಿತು. ಬೆಟ್ ಕಟ್ಟಿ ದುಡ್ಡು ಕಳೆದುಕೊಂಡವರೆಷ್ಟೋ!! ಕೊನೆಗೆ ಗೊತ್ತಾದುದು ಕ್ರಿಕೆಟ್ ಅಂದರೆ 'ಹಣದ ಆಟ' ವೆಂದು!! ▪

ವಿಚಾರ ವಿಹಾರ

ಮಾಲು, ಅಡಿಲೈಡ್

ಶ್ರೀ ಕೃಷ್ಣ

ಶ್ರೀ ಕೃಷ್ಣ ಯುಗ ಪುರುಷ, ಗೀತಾಚಾರ್ಯ, ಸರ್ವೋತ್ತಮ, ಸುಂದರ ಕಾಯ, ಗೋಪಾಲ, ಗಿರಿಧರ, ಗೋಪಿಕಾ ಪ್ರಿಯ, ಅಗೋಚರ, ಕವಿಗಳ ಪ್ರೇಮಿ, ಸಹಸ್ರ ನಾಮಾಂಕಿತ ಹಾಗೆಯೇ ಇವನು ಸರ್ವೇಶ್ವರ.

ಶ್ರೀ ಕೃಷ್ಣನು ಹಲವು ಜನಗಳ ಇಷ್ಟ ದೇವತೆ. ಅವನನ್ನು ಇಷ್ಟ ಪಡದವರು ಅಪರೂಪ. ಅವನನ್ನು ತಮ್ಮ ಕಾವ್ಯದಲ್ಲಿ ಬಂಧಿಸದ ಕವಿಗಳು ಬಹಳ ಇಲ್ಲ.

ಬೃಂದಾವನದ ವಾಸಿ ಮತ್ತು ಸುಂದರಾಂಗ ಶ್ರೀ ಕೃಷ್ಣನನ್ನು ನೋಡಲು ದೂರದ ಪುರವಾಸಿ ಹೆಂಗೆಳೆಯರು ಹೇಗೆ ಮೋಹಕರಾಗಿ ಅವನ ಕೊಳಲಿನ ಕರೆಗೆ ಮತ್ತು ಅವನ ದರ್ಶನದ ಭಾಗ್ಯಕ್ಕೆ ತವಕಪಡುತ್ತಿದ್ದರು ಎಂಬುದನ್ನು ಖ್ಯಾತ ಕವಿ ಶ್ರೀ ಪು.ತಿ. ನರಸಿಂಹಾಚಾರ್ ರವರು ತಮ್ಮ ಪ್ರಖ್ಯಾತ ಕೃತಿ 'ಕೃಷ್ಣನ್ನ ಕೊಳಲಿನಾ ಕರೆ' ಯಲ್ಲಿ ನಮ್ಮ ಮುಂದೆ ತೆರೆದಿಡುತ್ತಾರೆ.

'ಕೃಷ್ಣನ್ನ ಕೊಳಲಿನಾ ಕರೆ
ಆಲಿಸು ಕೃಷನ್ನಾ ಕೊರಳಿನಾ ಕರೆ' ಇದು ಆ ಸುಂದರ ಕೃತಿಯ ಪಲ್ಲವಿ

'ತೊಟ್ಟಲಿನಾ ಹಸುಗೂಸ ಮರೇ ಮರೇ
ಪಕ್ಕದ ಗಂಡನ ತೊರೆ ತೊರೆ
ಬೃಂದಾವನಕೆ ತ್ವರೆ ತ್ವರೆ'

ಇದು ಮೊದಲ ಚರಣ.

ಈ ಗೋಪಿಕೆಗೆ ಆ ಕೃಷ್ಣನ ಕೊಳಲಿನ ಕರೆ ಕೇಳಿ, ಅವನನ್ನ ನೋಡುವ ಕಾತುರದಲ್ಲಿ ತೊಟ್ಟಲಿನಲ್ಲಿ ಇರುವ ಮಗುವನ್ನ ಮರೆತು ಮತ್ತು ತನ್ನ ಪಕ್ಕದಲ್ಲಿ ಮಲಗಿದ್ದ ಗಂಡನ್ನ ತೊರೆದು ಹೋಗಿಬಿಡಬೇಕು ಅನಿಸುತ್ತದೆ ಅವಳಿಗೆ.

'ಹೊತ್ತಾರೆ ಹೊರೆ ಗೆಲಸ ಮಿಕ್ಕಾರೆ ಮಿಗಲಿ
ಪಕ್ಕದ ನೆರೆಹೊರೆ ನಕ್ಕಾರೆ ನಗಲಿ
ಬೃಂದಾವನದೋಳ್ ಆಲಿಸಿದೆ ಮುರಳಿ'
ಇದು ಮತ್ತೊಂದು ಚರಣ

ಅವಳು ಮನೆಗೆಲಸ ಎಲ್ಲ ಬಿಟ್ಟು ಹೋಗುತ್ತೇನೆ. ನನ್ನ ಮನೆಯ ಅಸ್ತವ್ಯಸ್ತ ನೋಡಿ ಪಕ್ಕದ ಮನೆಯವರು ನಕ್ಕರೂ ಪರವಾಗಿಲ್ಲ. ನಾನು ಆ ಬೃಂದಾವನದಿಂದ ಬಂದ ಕೊಳಲಿನ ದನಿಯನ್ನ ಕೇಳಿದ್ದೇನೆ, ಮನೋಹರ ಕೃಷ್ಣನನ್ನು ನೋಡಲೇಬೇಕು ಎನ್ನುತ್ತಾಳೆ. ಆ ಗೋಪಿಕೆಗೆ ಇನ್ನು ಸಹಿಸುವುದಕ್ಕೆ ಆಗುವುದಿಲ್ಲ ಆ ಕೊಳಲಿನ ಆಕರ್ಷಣೆ. ಆದರೆ ಆಗಿದದ್ದಾದರೂ ಏನು?!

'ಮುತ್ತಿನ ಕುಪ್ಪಸ ಹೆರಳೋಲೆ ' ಸಿಕ್ಕಿಸಿಕೊಳ್ಳುತ್ತಾಳೆ, 'ಮಲ್ಲಿಗೆ ಜಾಜಿ ಮುಡಿ ಮಾಲೆ' ಹಾಕಿಕೊಳ್ಳುತ್ತಾಳೆ. ಆದರೆ ಅವನನ್ನು ಕಾಣುವ ಆತುರದಲ್ಲಿ 'ಹೆಜ್ಜೆಯ ನೂಪುರ ಗೆಜ್ಜೆಯ ಪಿಳ್ಳಿ' ಎರಡನ್ನು 'ಮರೆತೇ ಬಂದೆನೆ ಮನೆಯಲ್ಲಿ' ಎಂದು ಬೇಸರ ಪಟ್ಟು ಕೊಳ್ಳುತ್ತಾಳೆ.

ಈ ಮೇಲಿನದು ಮನಸನ್ನು ಹಿಂಡುವ ಗೋಪಿಕೆಯ ಪ್ರಲಾಪ.

ಕೃಷ್ಣನನ್ನು ಅಲಕ್ಷ್ಯದಿಂದ ಕಾಣುವ ಆ ಅಭಿಮಾನಧನ ದುರ್ಯೋಧನನಿಗೆ ಆ ಗೋಪಿಕೆಯ ಮೋಹನ ಕೃಷ್ಣನ ದರ್ಶನ ಪಡೆದಾಗ ಏನೆನೆಸಿತು ಎಂಬುದನ್ನು ಆದಿ ಕವಿ ಪಂಪನ ಬಾಯಿಯಲ್ಲಿ ಕೇಳಿ!

'ಬರವೇಳ್ ಎಂಬುದು - ಅಂಜನಾಚಲದವೋಲ್ ಕಣ್ಗೆ ಒಪ್ಪಿ ಒರ್ಪ ಅಂಬುಜೋದರನಂ ಮೆಲ್ಲನೆ ನೋಡಿ, ಮೆಯ್ ಆಲಿದಂತೆ ಎಂತಾನುಂ ಎಳ್ದಿರ್ದು, ಕೇಸರಿ ಪೀಠಗ್ರದಿಂ ಅಪ್ಪಿಕೊಂಡು ಪೊಡೆವಟ್ಟು, ಅರ್ಘ್ಯಮನಿತ್ತು, ಅನಂತರಮೆ ತಾಂ ಕುಳ್ದಿರ್ದು - ದುರ್ಯೋಧನಂ...'

ಕೃಷ್ಣಾ ಪಾಂಡವರ ದೂತನಾಗಿ ಹೋದಾಗ, ಗರ್ವದಿಂದ 'ಬರ ಹೇಳು' ಎನ್ನುತ್ತಾನೆ ಸುಯೋಧನ ತನ್ನ ಸೇವಕನಿಗೆ. ಅವನಿಗೆ ಅರಿವಾಗದಂತೆ ಕೃಷ್ಣ ಪ್ರಫುಲ್ಲ ಮುಖವನ್ನು ಅವನ ಕಣ್ಣು ಕದ್ದು ನೋಡಿತು. ನೀಲಿಯ ಪರ್ವತವೇ ನಡೆದು ಬರುತ್ತಿದ್ದೆಯೇನೋ ಅನ್ನಿಸಿತು. ಆ ಅಂಜನಾಚಲದ ಆಗಮನದ ಎದುರಿಗೆ ಸಿಂಹಾಸನದಲ್ಲಿ ಕುಳಿತುಕೊಳ್ಳಲಾಗದೆ, ಎದ್ದು ಹೋಗಿ ಅವನನ್ನು ಬರಮಾಡಿಕೊಳ್ಳಬೇಕಾಯಿತು. ಅಷ್ಟೆ ಅಲ್ಲ, ಅವನ ಅಭಿಮಾನವನ್ನು ಬದಿಗಿಟ್ಟು, ಕೃಷ್ಣನಿಗೆ ಅರ್ಘ್ಯ ಕೊಟ್ಟ, ಪೂಜಿಸಿದ. ಅವನು ಪೀಠದಲ್ಲಿ ಕುಳಿತನಂತರವೇ ತಾನು ಸಿಂಹಾಸನದಲ್ಲಿ ಕುಳಿತ.

ಕೃಷ್ಣನ ವ್ಯಕ್ತಿತ್ವ ಅಂತಹದು.

ಕೃಷ್ಣನು ಮಹೋನ್ನತ. ಅವನ ಸೊಗಸು ಎಷ್ಟು ವರ್ಣಿಸಿದರೂ ಇನ್ನೂ ಮಿಕ್ಕುತ್ತದೆ.

'ಸರ್ವ ದೇವ ನಮಸ್ಕಾರಂ ಕೇಶವಂ ಪ್ರತಿ ಗಚ್ಛತಿ' ▪

ರಾಂ ರಾಮ

ಇದು ಹಾಸ್ಯ ಪುಟ

ಶ್ರೀ ರಾಮನಾಥ್ ಅವರು ಉತ್ತರಿಸುವ "ನೀವು ಕೇಳಿದಿರಿ" ಬ್ಲಾಗ್ನಲ್ಲಿ ಲಭ್ಯ. ಕೆಳಗಿನ ಲಿಂಕ್ ಕ್ಲಿಕ್ ಮಾಡಿ

ನೀವು ಕೇಳಿದಿರಿ

ರಾಮನಾಥ್
ಭಾಷಣಕಾರರು, ಹಾಸ್ಯ ಲೇಖಕರು

ಸೀನುವಿನ ವಾರ್ಷಿಕೋತ್ಸವ ವ್ಯಾಖ್ಯಾನ

'ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು' ಎಂದೆ.

'ಆನಿವರ್ಸರಿ ಅನ್ನೋ' ಸೀನು ಉವಾಚ.

'ಎರಡೂ ಒಂದೇ ಅಲ್ಲವೇನೋ?'

'ಮದುವೆ, ಮಂತ್ರಿಗಿರಿಗಳಿಗೆ ವಾರ್ಷಿಕೋತ್ಸವ ಅನ್ನಬಾರದು. ಆನಿವರ್ಸರಿ ಅನ್ನಬೇಕು'

'ಯಾಕೆ?'

'ಆನಿಯಂತಹವಳನ್ನ ಕಟ್ಟಿಕೊಂಡು ಏನೇ ಉಗಿದರೂ ಒರೆಸಿಕೊಂಡು ಹೋಗೋ ಬುದ್ಧಿ ಬೆಳೆಸಿಕೊಳ್ಳೋದ್ರಿಂದ ಆನಿವರ್ಸರಿ!'

'ಮಂತ್ರಿಗಳ ಬಾಬ್ತು?'

'ಬಿಳಿ ಆನೆಗಳು, ನಾವು ಅಂದಿದ್ದನ್ನೆಲ್ಲಾ ಕಿವಿಗೇ ಹಾಕಿಕೊಳ್ಳದೆ, ಉಗಿದದ್ದನ್ನು ಒರೆಸಿಕೊಂಡು ಸರಿದು ಹೋಗೋದ್ರಿಂದ ಆನಿವರ್ಸರಿ'

'ಒಳ್ಳೆ ವಿಶ್ಲೇಷಣೆ ನಿನ್ನದು. ಹಿಂದಿಯವರು ಸಾಲ್ ಗಿರಾಹ್ ಅಂತಾರಲ್ಲಾ, ಅದು ವಾರ್ಷಿಕೋತ್ಸವ ಒಂದೇ ಅಲ್ವಾ?'

'ಅಲ್ಲ'

'ಹೇಗೆ?'

'ಸಾಲ ಮಾಡಿ ಗಿರವಿ ಇಡೋ ಮಟ್ಟಕ್ಕೆ ಸಂಸಾರ ಬಂದಿದ್ದರೆ ಸಾಲ್ ಗಿರಾಹ್ ಅನ್ನಬಹುದು! ಸಾಲ ಮಾಡಿ, ಬಡ್ಡಿ ಕಟ್ಟಕ್ಕೂ ಆಗದೆ ತಲೆ ಗಿರ್ ಅನ್ನಿಸಿ ಬಾಯಿಯಿಂದ ಆಹ್! ಅಂತ ಉದ್ಗಾರ ಹೊರಡಿಸೋ ಸ್ಥಿತೀಗೂ ಸಾಲ್ ಗಿರಾಹ್ ಅನ್ನಬಹುದು.'

'ಕರ್ನಾಟಕ ಸರ್ಕಾರಕ್ಕೆ ಎರಡು ವರ್ಷ ತುಂಬಿತು. ಇದು ಸಾಲ್ ಗಿರಾಹೋ ಅಥವಾ ಆನಿವರ್ಸರಿಯೋ?'

'ಸದ್ಯಕ್ಕೆ ಆನಿವರ್ಸರಿ. ಶೀಘ್ರದಲ್ಲೇ ಸಾಲ್ ಗಿರಾಹ್'

'ಹೇಗೆ?'

'ಒಂದು ರೂಪಾಯಿಗೆ ಅಕ್ಕಿ ಕೊಟ್ಟು ತಿಜೋರಿ ಖಾಲಿ ಮಾಡಿದರೆ ಸಾಲಕ್ಕೆ ಕೈಚಾಚಿ, ಚಾಚಿ, ಸಾಲ್ ಗಿರಾಹ್ ಆಗೋದು ಗ್ಯಾರಂಟಿ'

'ವಾರ್ಷಿಕೋತ್ಸವ ಯಾವುದು?'

'ಬಹಳ ಇವೆ. ವಾರ್ ಸಿಕ್ಕೋತ್ಸವ, ವಾರಸಿಕೋತ್ಸವ, ವಾರಶಿಖೋತ್ಸವ, ವಾರ್ಶಿಖೋತ್ಸವ, ವಾರ್ಶ್ರೀಕೋತ್ಸವ, ವಾರ್ಷಿಕೋತ್ಸವ'

'ಏನೋ ಇವೆಲ್ಲಾ?'

'ವಾರ್ ಸಿಕ್ಕೋತ್ಸವ ಅನ್ನೋದು ಚಾನಲ್ಗಳಿಗೆ ಸಂಬಂಧಿಸಿದ್ದು. War ಅಥವಾ ಕಾದಾಟಕ್ಕೆ ಸಂಬಂಧಿಸಿದ ವಿಷಯ - ಗ್ಯಾಂಗ್ ವಾರ್, ಮಿನಿಸ್ಟರ್ ವಾರ್, ಮೆಗಾಸ್ಟಾರ್ ವಾರ್, ರಾಖಿ ಸಾವಂತ್-ಸನಿ ಲಿಯೋನ್ ವಾರ್, ಯಾವುದೂ ಸಿಗದೆ ಇದ್ದರೆ ಎದುರು ಇರುವ ದೀವಾರ್... ಇವು ಯಾವುದೇ ಸಿಕ್ಕರೂ ಅವರಿಗೆ ಅವತ್ತಿನ ದಿನವೆಲ್ಲ ಉತ್ಸವವೇ. ಆ ಉತ್ಸವವೇ ವಾರ್ ಸಿಕ್ಕೋತ್ಸವ!'

'ಗಂಡ-ಹೆಂಡತಿ ಜಗಳ?'

'ಅದು ವೀಕ್ಲಿ ಪ್ರೋಗ್ರಾಮೇ ಆಗಿರುವುದರಿಂದ ವಾರದ ವಾರ್'

'ಐ ಸೀ. ವಾರಸಿಕೋತ್ಸವ?'

'ಅದರಲ್ಲಿ ಮೂರು ವಿಧ. ಪ್ರತಿ ಶುಕ್ರವಾರದ ವಾ! ರಸಿಕೋತ್ಸವ, ಆಶ್ರಮದವರ ವಾ! ರಸಿಕೋತ್ಸವ, ಸೋಮವಾರದ ವಾರ sickಓತ್ಸವ'

'ವಿworryಸು'

'ಪ್ರತಿ ಶುಕ್ರವಾರ ತಮ್ಮ ತಮ್ಮ ಹೀರೋಗಳ ಕಟೌಟ್ ಏರಿಸ್ಕೊಂಡು ವಾ! ವಾ! ಅಂತ ಕೂಗ್ತಾ ಮೆರವಣಿಗೆ ಹೋಗೋದು ಒಂದು ವಾರಸಿಕೋತ್ಸವ'

'ಸರಿ'

'ಕಳ್ಳ ಆಶ್ರಮದ ಕಳ್ಳ ಶ್ರೀಶ್ರೀಗಳು ಬಂದ ಸುಂದರಿಯನ್ನು ನೋಡಿ ವಾ! ಎನ್ನುತ್ತಾ ಉತ್ಸವದ ರೀತಿಯಲ್ಲಿ ಅವಳತ್ತ ಸಾಗುವುದು ಇನ್ನೊಂದು ವಾರಸಿಕೋತ್ಸವ'

'ಇನ್ನೊಂದು ಬಿಟ್ಟೆಯಲ್ಲೋ...'

'ಯಾವುದು?'

ಮುಂದಿನ ಪುಟ ನೋಡಿ ...

‘ಮಂತ್ರಿಗಳು ವಿಧಾನಸೌಧದಲ್ಲಿ ಕೂತು ಪೋರ್ನೋಗ್ರಫಿ ನೋಡ್ತಾ ಜೊಲ್ಲು ಸುರಿಸೋದು ವಾ! ರಸಿಕೋತ್ಸವವೇ ಅಲ್ಲವೇನೋ..?’

‘ಯೂ ಆರ್ ರೈಟ್’

‘ಸೋಮವಾರದ್ದು?’

‘ಶನಿವಾರ, ಭಾನುವಾರ ರಜ ಮುಗಿಸಿಕೊಂಡು ಸೋಮವಾರ ಕೆಲಸಕ್ಕೆ ಬರಕ್ಕೆ ಲಂಚ ಸಖತ್ ಬರೋವ್ನಿಗೆ ಸಹ ಸೋಮಾರಿತನ ಮೂಡತ್ತೆ. ಇನ್ನು ಪ್ರೈವೇಟ್ನವರಿಗೆ ಆಗದೇ ಇರುತ್ಯೇ? ಅದಕ್ಕೇ ಸುಮಾರು ಪ್ರೈವೇಟ್ ಕಂಪನಿಗಳಲ್ಲಿ ಸೋಮವಾರಾನೇ ಜಾಸ್ತಿ sick leave ಅಪ್ಲೈ ಮಾಡೋದು. ಆ sick leave ಅಪ್ಲೈ ಮಾಡೋ ಬಾಬ್ತೇ ವಾರ sickಓತ್ಸವ.’

‘ನೆಕ್ಸ್ಟ್ ಇನ್ ಲೈನ್ ಇರೋದು ವಾರಶಿಖೋತ್ಸವ. ವಾಟ್ ಎಬೌಟ್ ದಿಸ್ಸು?’

‘ಅದರಲ್ಲಿ ಎರಡು ವಿಧ. ಮೇಲ್ ವಾರಶಿಖೋತ್ಸವ, ಫಿಮೇಲ್ ವಾರಶಿಖೋತ್ಸವ. ಮೇಲ್ ವಾರಶಿಖೋತ್ಸವದಲ್ಲೂ ಓಲ್ಡ್ ವಾರಶಿಖೋತ್ಸವ, ನ್ಯೂ ವಾರಶಿಖೋತ್ಸವ ಅಂತ ಇವೆ’

‘ಏನೋ ಹಾಗಂದ್ರೆ...?’

‘ಓಲ್ಡ್ ವಾರಶಿಖೋತ್ಸವ ಅಂದ್ರೆ ಹಿಂದಿನ ಕಾಲದಲ್ಲಿ ಪಿಳ್ಳುಜುಟ್ಟು ಅಂತ ಇರೋದು. ವಾರಕ್ಕೊಮ್ಮೆ ಅದಕ್ಕೆ ಚೆನ್ನಾಗಿ ಎಣ್ಣೆ ಹಾಕಿ, ಚೆನ್ನಾಗಿ ನೀವಿ, ಒಂದೇ ಅಳತೆ ಇರೋ ತರಹ ಕೂದಲನ್ನ ಸಿಂಗಾರ ಮಾಡಿಕೊಂಡು, ಅದನ್ನ ಕುದುರೆ ಬಾಲದ ರೀತಿಯಲ್ಲಿ ಎತ್ತಿ ಕಟ್ಟೋದ್ರಲ್ಲಿ ಪಡ್ತಿದ್ದ ಸಂಭ್ರಮವೇ ಓಲ್ಡ್ ವಾರಶಿಖೋತ್ಸವ’

‘ನ್ಯೂ?’

‘ಇದು ನಾಟ್ ರಿಯಲಿ ಶಿಖೋತ್ಸವ. ಶಿಖೆ ಅಂದ್ರೆ ಕೂದಲು ಅಂತ broader senseನಲ್ಲಿ ತೊಗೊಂಡು derive ಮಾಡ್ಕೊಂಡಿರೋ ಅರ್ಥ. ವಾರಕ್ಕೊಮ್ಮೆ ಶೇವಿಂಗ್, ಗಡ್ಡ ಟ್ರಿಮಿಂಗ್ ಮಾಡ್ಕೊಳ್ಳೋದೆ ಮೇಲ್ ವಾರಶಿಖೋತ್ಸವ’

‘ನೀನೋ... ನಿನ್ನ ವಿಂಗಡಣೆಗಳೋ... ನಿನ್ನ ತಲೆ ಬೋಳ್ಸ!’ ಸಿಡುಕಿದೆ.

‘ಸುಮ್ಮನಿರೋ. ನೀನೇನು ಮಹಾ ಬೋಳಿಸಬಲ್ಲೆ. ಬೋಳಿಸಕ್ಕೂ ತಾಕತ್ತು ಬೇಕು’

‘ಏನೋ ಹಾಗಂದ್ರೆ?’

‘ನೀನು ಏನೇ ಬೋಳಿಸಿದರೂ ಒಂದು ವಾರಕ್ಕೆ ಕೂದಲು ವಾಪಸ್ ಬರತ್ತೆ. ಆದರೆ ಸರ್ಕಾರ ತೆರಿಗೆ ಮೂಲಕ, ಬೆರೆ ಏರಿಕೆ ಮೂಲಕ, ಸಾಲ ಮನ್ನಾ ಮೂಲಕ ಬೋಳಿಸಿದರೆ ಪರ್ಮನೆಂಟ್ ಬೋಳು. Also, the best barber is nature itself. ಕ್ಷೌರಿಕ ಬೋಳಿಸಿದ ಕೂದಲು ವಾಪಸ್ ಬರತ್ತೆ. ಪ್ರಕೃತಿ ಒಂದು ಸರತಿ ಬೋಳಿಸಿದರೆ ಬಾಂಡ್ಲೀನೇ!’

‘ಓಕೆ. Come back to the subject proper. ಫೀಮೇಲ್ ವಾರಶಿಖೋತ್ಸವ ಅಂದ್ರೆ?’

‘ಬ್ಯೂಟಿ ಪಾರ್ಲರ್ಗಳಲ್ಲಿ ವಾರಕ್ಕೊಂದು ಸರ್ತಿ ಹೇರ್ ಸ್ಟೈಲ್, ವ್ಯಾಕ್ಸಿಂಗ್, ಥ್ರೆಡಿಂಗ್ ಮಾಡಿಸ್ಕೊಳ್ಳೋದು!’

‘ವಾರ್ಶಿಖೋತ್ಸವ?’

‘This is the most powerful of all utsavas. ಇದಕ್ಕೆ ಹಿಸ್ಟಾರಿಕ್ ಬ್ಯಾಗ್ರೌಂಡ್, ಮೈಥಲಾಜಿಕಲ್ ಬ್ಯಾಗ್ರೌಂಡ್, ಎಲ್ಲ ಇವೆ.’

‘ಅದೇನು ಎಳೆಎಳೆಯಾಗಿ ಬಿಡಿಸಿ ಹೇಳೋ...’

‘ಛಿ! ಎಳೆಎಳೆಯಾಗಿ ಬಿಡಿಸಿ ಹೇಳಕ್ಕೆ ನನ್ನನ್ನೇನು ಟಿವಿ ಸೀರಿಯಲ್ ಡೈರೆಕ್ಟ್ರು ಅನ್ಕೊಂಡ್ಯಾ? ಇರಲಿ. ಕೂದಲು ಬಿರಿಬಿಟ್ಟಿದ್ದೇ ಕಣೋ ಇದರ ವಿಷಯ. ರಾಮಾಯಣದಲ್ಲಿ ಕೈಕೇಯಿ ತನ್ನ ಕೂದಲು ಬಾಚದೆ ಬಿಟ್ಟು ಕೋಪಗೃಹಕ್ಕೆ ಹೋಗಿ ಕೂತಳು. ಹೆಂಡತಿ ಕೋಪ ಮಾಡ್ಕೊಂಡ್ರೆ ಓಕೆ, ಆದರೆ ಕೂದಲು ಬಿರಿಬಿಟ್ಟು, ಬಾಚ್ಕೊಳ್ದೇನೇ ಕೂತ್ರೆ ಮನೇಲಿ, ಅಡಿಗೇಲಿ, ಎಲ್ಲ ಕಡೆಯೂ ಕೂದಲು ಬೀಳತ್ತೆ. ಅವತ್ತು ಕೈಕೇಯಿ ಕೋಪದಿಂದ ಕುದಿದು, ಕುದಿಯೋ ನೀರಿಗೆ ರವೆ ಹಾಕಿ, ಉಪ್ಪಿಟ್ಟು ಮಾಡಿ, ನಂತರ ಕೋಪಗೃಹಕ್ಕೆ ಹೋಗಿದ್ದಂತೆ. ಅವತ್ತಿನಿಂದ ಇವತ್ತಿನವರೆಗೆ ಉಪ್ಪಿಟ್ಟಿನಲ್ಲಿ ಕೂದಲು ಸಿಗತ್ತಲ್ಲ, ಅದಕ್ಕೆ ಕೈಕೇಯಿ ಎಫೆಕ್ಟ್ ಅಂತಾನೇ ಕರೆಯೋದು.’

‘ವಿಷಯಾಂತರ ಮಾಡಬೇಡವೋ...’

‘ಸರಿ ಸರಿ. ರಾಮಾಯಣದಲ್ಲಿ ಕೈಕೇಯಿ ಶಿಖೆ ಉರುಫ್ ಕೂದಲು ಬಿರಿಬಿಟ್ಟು ಗಂಡನೊಡನೆ ವಾರ್ ಬಗ್ಗೆ ಮಾತನಾಡ್ತಾ ವಾರ್ ಮಾಡಿದ್ದು ಒಂದು ವಾರ್ಶಿಖೋತ್ಸವ. ಚಾಣಕ್ಯ ತನ್ನ ಶಿಖೆಯನ್ನ ನಂದರು ನಾಶವಾಗೋವರೆಗೂ ಕಟ್ಟುವುದಿಲ್ಲ ಅಂತ ಶಪಥ ಮಾಡಿ ನಂದ-ಚಂದ್ರಗುಪ್ತ ವಾರ್ ನಡೆಸಿ, ಗೆದ್ದನಂತರ ಶಿಖೆ ಕಟ್ಕೊಂಡಿದ್ದೊಂದು ವಾರ್ಶಿಖೋತ್ಸವ. ಬಟ್ ದ ಲಾಂಗೆಸ್ಟ ವಾರ್ಶಿಖೋತ್ಸವ ವಾಸ್ ದಟ್ ಆಫ್ ದ್ರೌಪದಿ.’

‘ನಿಂದೊಳ್ಳೇ ರಾಮಾಯಣ ಆಯ್ತು!’

‘ರಾಮಾಯಣ ಮುಗೀತೋ. ಈಗ ಮಹಾಭಾರತ. ಕುರುಕ್ಷೇತ್ರ ಯುದ್ಧ ನಡೆದದ್ದು ಯಾಕೆ ಅನ್ಕೊಂಡೆ? ಭೂಮಿ, ವೈರ, ಸೇಡು ಅವೆಲ್ಲಾ ಕಾರಣವೇ ಅಲ್ಲ.’

‘ಮತ್ತೆ?’

ಮುಂದಿನ ಪುಟ ನೋಡಿ ...

‘ದ್ರೌಪದಿಯೇ! ತುಂಬಿದ ಸಭೆಯಲ್ಲಿ ಬಿಚ್ಚಿದ ಕೂದಲನ್ನ ಹದಿಮೂರು ವರ್ಷ ಬಾಚಿಕೊಳ್ಳದೇ ಇದ್ದರೆ ತಲೆ ಎಷ್ಟು ವಾಸನೆ ಬಂದಿರತ್ತೆ ಅಂತ ಊಹಿಸಕ್ಕೂ ಸಾಧ್ಯ ಇಲ್ಲ. ‘ತಲೆ ಬಾಚ್ಕೋ ದ್ರೌಪದಿ’ ಅಂದ್ರೆ ‘ದುಶ್ಯಾಸನ ಬ್ಲಡ್ ಬ್ಯಾಂಡ್ ಹೇರ್ ಆಯಿಲ್ ತಂದ್ಕೊಡು. ರಿಬ್ ಕೂಂಬ್ ತಂದ್ಕೊಡು’ ಅಂತಿದ್ಳು. ಹೆಣ್ಣಿನ ಹಠವೇ ಹಠ. ಆಗಿನ ಕಾಲದಲ್ಲಿ ‘she stinks’ ಅನ್ನೋ ಕಾರಣಕ್ಕೆ divorce ಸಿಕ್ತಿರಲಿಲ್ಲ. Also, ಧರ್ಮರಾಯ ವಿಚ್ಛೇದನಂ ಮಹಾಪಾಪಂ ಅನ್ನೋವ್ನು. ಪಾಂಡವರೆಲ್ಲ united we stand, divided we fall ಅಂತಿದ್ರು. ಹೀಗಾಗಿ suffering draupadi was mandatory. ಆ ಸಫರಿಂಗ್ ತಡೆಯಕ್ಕಾಗದೆ, ಅವಳಿಗೆ ಬೇಕಾದ ಬಾಚಣಿಗೆ, ಹೇರ್ ಆಯಿಲ್ ಗಳಿಸಕ್ಕೇಂತ ಆ war ನಡೆದದ್ದು. ಕೂದಲನ್ನು ಶಿಖೆಯಾಗಿ (ಜಡೆಯಾಗಿ) ಕಟ್ಟಿಕೊಳ್ಳಕ್ಕಾಗಿ ಯುದ್ಧ ನಡೆಸಿ ಗೆದ್ದ ಸಂಭ್ರಮವೇ ವಾರ್ಶಿಖೋತ್ಸವ!’

‘ಅಬ್ಬಬ್ಬ! ನಿನ್ನ ವಾದ ಕೇಳ್ತಿದ್ರೆ ಕೂದಲೆಲ್ಲಾ ಕಿತ್ಕೊಂಡು ಓಡಿಹೋಗ್ಬಿಡೋಣ ಅನ್ಸತ್ತೆ. ಸಾಕು ಮಾಡಯ್ಯ ನಿನ್ನ ಕೇಶಪುರಾಣ’

‘ಇದೋ.. ಕೂದಲಿನ ವಿಷಯ ಬಿಟ್ಟೆ. ಮುಂದಿನದು ವಾರ್ಶ್ರೀಕೋತ್ಸವ’

‘ಏನು ಹಾಗಂದ್ರೆ?’

‘ಬೀದಿ ನಲ್ಲಿ ಹತ್ತಿರ, ಪಾರ್ಲಿಮೆಂಟಲ್ಲಿ, ಪಕ್ಷದ ಸಭೆಗಳಲ್ಲಿ shriek ಮಾಡಿಕೊಂಡು, ಜುಟ್ಟಾಜುಟ್ಟಿ, ಕೇಶಾಕೇಶಿ, ಕ್ರಾಪಾಕ್ರಾಪಿ, ಬಾಂಡ್ಲಾಬಾಂಡ್ಲಿ ಕದನ, ಕಾಳಗ, ಯುದ್ಧ, ಸಮರ, ರಣ ಮಾಡ್ತಾರಲ್ಲಾ, ಅದೇ ವಾರ್ಶ್ರೀಕೋತ್ಸವ.’

‘ವಾರ್ಷಿಕೋತ್ಸವ?’

‘she ಅಂದರೆ ಅವಳು ಉತ್ಸವದ ಮೂಡ್ನಲ್ಲಿಯೇ ಇರುವಹಾಗೆ ಕಾಪಾಡಿಕೊಳ್ಳಲು ಟ್ರಿಪ್, ಹೊಟೆಲ್, ರೆಸಾರ್ಟ್, ಶಾಪಿಂಗಳಿಗೆ ಕರೆದುಕೊಂಡುಹೋಗೋದೇ ವಾರ್ಷಿಕೋತ್ಸವ.’

‘ಹೊರನಾಡ ಚೆಲುಮೆ ಎರಡು ವರ್ಷ ತುಂಬಿತಲ್ಲ, ಅದರದೂ ವಾರ್ಷಿಕೋತ್ಸವ ಅಲ್ಲವೇನೋ?’

‘In a way.’

‘ಅಂದ್ರೆ?’

‘ಲೇಖಕರನ್ನೆಲ್ಲಾ ವಾರವಾರವೂ ಆರ್ಟಿಕಲ್ ಕೊಡಿ ಅಂತ ಕೇಳುತ್ತಾ, ವಿಳಂಬವಾದಾಗ ಕ್ರಾಪ್ ಕೂದಲಲ್ಲಿ ಕೈಹಾಕಿ ತಲೆ ಕೆಡಿಸಿಕೊಳ್ಳುತ್ತಾ, ಕಡೆಗೂ ಎರಡು ವರ್ಷ ಮುಟ್ಟಿದ ಉತ್ಸವ ಆದ್ದರಿಂದ ವಾರ್ಷಿಕೋತ್ಸವ ಅನ್ನೋದು ಸರೀನೇ.’

‘ಸೀನೂ... ಯಾವ ಯುದ್ಧವೂ ಮಾಡದೆ, ಜಗಳವೂ ಕಾಯದೆ, ಈ extentಗೆ ನನ್ನ ತಲೆ ತಿಂದು ನನ್ನನ್ನ ಚಿತ್ತು ಮಾಡಿಸೋ ಕಲೆಗೆ ಏನಂತಾರೋ?’

ಸೀನು ನಿರುತ್ತರನಾದ. ▪

ಕನ್ನಡದಲ್ಲಿ ಟೈಪ್ ಮಾಡೋದು ಹೇಗೆ

ಹೊರನಾಡ ಚೆಲುಮೆ - ಸೆಪ್ಟೆಂಬರ್ ೨೦೧೩ ರ ಸಂಚಿಕೆಯಲ್ಲಿ google input tools ಉಪಯೋಗಿಸಿ ಕನ್ನಡದಲ್ಲಿ ಹೇಗೆ ಟೈಪ್ ಮಾಡಬಹುದು ಎಂದು ತಿಳಿದು ಕೊಂಡಿರಿ.

ಪೂರ್ಣ ಮಾಹಿತಿಗೆ ಸೆಪ್ಟೆಂಬರ್ ೨೦೧೩ ರ ಸಂಚಿಕೆಯನ್ನು ನೋಡಲು ಈ ಲಿಂಕ್ ಕ್ಲಿಕ್ ಮಾಡಿ.

ಸಂಕ್ಷಿಪ್ತ ಮಾಹಿತಿ ಇಲ್ಲಿದೆ

ಗೂಗಲ್ ಇನ್ಪುಟ್ ಟೂಲ್ಸ್ (Google input tools) ಯೂನಿಕೋಡ್ ಆಧಾರಿತ ಒಂದ ತಂತ್ರಾಂಶ. ಇದನ್ನು ನಿಮ್ಮ ಕಂಪ್ಯೂಟರ್ ನಲ್ಲಿ install ಮಾಡಿದರೆ ಕನ್ನಡದಲ್ಲಿ ನೀವು ನೇರವಾಗಿ word, excel ಇತ್ಯಾದಿ office ಸಾಫ್ಟ್ವೇರ್ ಅಲ್ಲದೆ, ಸಮಾಜ ತಾಣಗಳಾದ ಫೇಸ್ಬುಕ್ , ಜಿ-ಪ್ಲಸ್ ಇತ್ಯಾದಿಗಳಲ್ಲೂ ಟೈಪ್ ಮಾಡಬಹುದು.

INSTALL ಮಾಡುವ ಮತ್ತು ಉಪಯೋಗಿಸುವ ವಿಧಾನ

1. http://www.google.com/inputtools/windows/index.html - ಈ ಲಿಂಕ್ ಕ್ಲಿಕ್ ಮಾಡಿ

   ಇರುವ ಹಲವಾರು ಭಾಷೆಗಳ ಲಿಸ್ಟ್ ನಲ್ಲಿ ಕನ್ನಡ ಕ್ಲಿಕ್ ಮಾಡಿ install ಮಾಡಿ.

   ಆಂಗ್ಲ ಭಾಷೆಯಲ್ಲಿ ಟೈಪ್ ಮಾಡುತ್ತಿದ್ದಾಗ ಕನ್ನಡ ಟೈಪ್ ಮಾಡಲು ಒಟ್ಟಿಗೆ CTRL + G ಕೀ ಒತ್ತಿ. ಆಗ ಆಂಗ್ಲದಿಂದ ಕನ್ನಡಕ್ಕೆ ಕೀಲಿಮಣೆ ಸಿದ್ಧವಾಗುತ್ತದೆ. ನಂತರ ನೀವು ಮತ್ತೆ ಆಂಗ್ಲ ಪದ ಬಳಸಬೇಕಾದರೆ ಮತ್ತೆ CTRL + G ಕೀ ಒಟ್ಟಿಗೆ ಒತ್ತಿ.

ಸೂಚನೆ: ಕೆಲವೊಮ್ಮೆ ಈ ಬಾಕ್ಸ್ ಕಾಣಿಸದಿದ್ದರೆ ಒಟ್ಟಿಗೆ ALT + SHIFT ಕೀ ಒತ್ತಿ

ನೀವೂ ಜಾಹೀರಾತು ನೀಡಲು ಬಯಸುವಿರಾದರೆ ನಮಗೆ ಇ-ಮೇಲ್ ಮಾಡಿ: horanadachilume@gmail.com

Contact Mr Sudheendra Rao EMAIL
Mobile 0415 291 723

Contact Mr.Sathya Bhat EMAIL
Mobile 0412 918 511

Contact Mr Umesh EMAIL
Mobile 0401 034 456

Contact Mr Eranna Gotyal EMAIL
Mobile 0404 215 605

ಕಥಾ ಚೆಲುಮೆ

ಎರಡು ಕಪ್ಪೆಗಳು

ಕನಕಾಪುರ ನಾರಾಯಣ

ಮಳೆಗಾಲದ ಸಮಯ ರಾತ್ರಿ ಸಮಯ ಭೀಕರ ಸಿಡಿಲು ಗುಡುಗು ಧಾರಾಕಾರವಾಗಿ ಸುರಿಯುವ ಮಳೆ ಝರಿ ಪ್ರವಾಹದಿಂದುಕ್ಕಿ ಹರಿಯುವುದನ್ನು ಅರಿತ ಕಪ್ಪೆಗಳು ಛಂಗನೆ ನೆಗೆಯುತ್ತಾ ನೆಗೆಯುತ್ತಾ ವಲಸೆ ಹೋಗುತ್ತಿದ್ದವು, ಆಗ ಎರಡು ಕಪ್ಪೆಗಳು ಕತ್ತಲೆಯ ಕಾನನದಿ ಕಣ್ಮಾಣದೆ ಆಳವಾದ ಕಂದರದಲ್ಲಿ ಕಾಲುಜಾರಿ ಬಿದ್ದುಬಿಟ್ಟವು.ಎಷ್ಟು ಪ್ರಯತ್ನಿಸಿದರೂ ಮೇಲಕ್ಕೆ ಎಟುಕದಷ್ಟು ಆಳ, ಎರಡೂ ಕಪ್ಪೆಗಳು ಎಡಬಿಡದೆ ಜಿಗಿಯಲೆತ್ನಿಸಿದವು. ಉಳಿದ ಕಪ್ಪೆಗಳು ಇದನ್ನು ಕಂಡು " ಅಯ್ಯೋ ಬಿದ್ದುಬಿಟ್ಟಿರಾ, ಅಷ್ಟೇ ಬಿಡಿ ಅಲ್ಲಿದ್ದರೆ ನೀವು ಬದುಕಿದ್ದರೂ ಸತ್ತಂತೆ,ಇನ್ನೇನು ನಿಮ್ಮ ಕಥೆ ಅಷ್ಟೇ" ಎಂದು ಹಾಸ್ಯ ಮಾಡುತ್ತ ನಗಲಾರಂಭಿಸಿದವು, ಈ ಎರಡೂ ಕಪ್ಪೆಗಳು ಬಿಡದೆ ಪ್ರಯತ್ನ ಮಾಡುತ್ತಿದ್ದವು, ಉಳಿದವು ಕೂಗುತ್ತಲೇ ಇದ್ದವು"ಏ ಕೇಳಿಸಲಿಲ್ಲವೇ ನಿಮಗೆ, ನೀವಿನ್ನು ಸತ್ತಂತೆ,..ಸತ್ತಂತೆ," ಅಷ್ಟರಲ್ಲಿ ಒಂದು ಕಪ್ಪೆ ನೆಗೆದೂ ನೆಗೆದೂ ಸುಸ್ತಾಗಿ ತಲೆಕೆಳಗಾಗಿ ಬಿದ್ದು ಪ್ರಾಣ ಬಿಟ್ಟಿತು, ಇನ್ನೊಂದು ಮಾತ್ರ ತನ್ನ ಪ್ರಯತ್ನವನ್ನು ಬಿಡದೇ ಮಾಡಿತ್ತು,ಮೇಲಿದ್ದ ಕಪ್ಪೆಗಳು ತಂಪಾಡಿಗೆ ಕೈಚಾಚಿ ಆಡಿಕೊಳ್ಳುತ್ತಾ ಅರಚುತ್ತಲೇ ಇದ್ದವು ಆದರೆ ಉಳಿದಿದ್ದ ಒಂದೇ ಕಪ್ಪೆ ಎಗರೀ ಎಗರೀ ಸುಸ್ತಾದರೂ ಶಕ್ತಿಮೀರಿ ಮೇಲಕ್ಕೆ ಜಿಗಿದೇ ಬಿಟ್ಟಿತು,,ಮೇಲಿದ್ದ ಕಪ್ಪೆಗಳು ಅಚ್ಚರಿಯಿಂದ ಬೆಪ್ಪಾಗಿ ಮುಂದೆಬಂದು ಅದನ್ನು ಅಭಿನಂದಿಸಿದವು,"ನಾವೆಲ್ಲಾ ನಿನ್ನನ್ನು ಅಷ್ಟು ದುರ್ಲಕ್ಷ್ಯದಿಂದ ಕಡೆಗಣಿಸಿದರೂ ನೀನು ಉತ್ಸಾಹ ಕಳೆದುಕೊಳ್ಳದೆ ಜೀವಂತವಾಗಿ ಮೇಲೇರಿ ಬಂದೆ,ನಮ್ಮನು ಕ್ಷಮಿಸು ನಿನ್ನ ಸಾಹಸ ಮೆಚ್ಚುವಂಥದ್ದು" ಎಂದು ಪ್ರಶಂಸಿಸಿದವು,ಅದಕ್ಕೆ ಆ ಕಪ್ಪೆ "ಅಯ್ಯಾ ನೀವೇನು ಹೇಳುತ್ತಿದ್ದೀರೋ ನನಗೊಂದೂ ತಿಳಿಯದು ನನಗೆ ಹುಟ್ಟು ಕಿವುಡು, ನೀವೆಲ್ಲಾ ನನ್ನ ಕಡೆ ನೋಡಿಕೊಂಡು,ಕೈ ಬೀಸುತ್ತಾ ಅಷ್ಟು ಪ್ರೋತ್ಸಾಹಿಸಿದ್ದಕ್ಕೆ ಧನ್ಯವಾದಗಳು" ಎಂದಿತು.

ಈ ಕಥೆಯಲ್ಲಿ ಎರಡು ನೀತಿಗಳಿವೆ.

೧.ಮಾತಿನ ಶಕ್ತಿ ಬಿದ್ದವರನ್ನು ಮೇಲಕ್ಕೂ ಎತ್ತಬಹುದು.

೨. ಕೆಳಕ್ಕೆ ಬಿದ್ದವರನ್ನು ಅದೇ ಮಾತಿನಿಂದ ಧೈರ್ಯಗೆಡಿಸಿದರೆ ಮತ್ತೂ ಪಾತಾಳಕ್ಕೆ ತಳ್ಳಿದಂತಾಗಿ ಮೃತ್ಯುವೇ ಬರಬಹುದು ▪

ಬ್ಲಾಗ್ ಲೋಕ

ಓದಲು ಚಿತ್ರದ ಕೆಳಗಿರುವ ಲಿಂಕ್ ಕ್ಲಿಕ್ ಮಾಡಿ

ಕನಕಾಪುರ ನಾರಾಯಣ
ಇವರ "ಚಕ್ಕೆ ಮೊಗ್ಗು"

ಸುದರ್ಶನ್. ಏನ್
ಇವರ "ಅನಿವಾಸಿ"



ಬದರಿ ತ್ಯಾಮಗೊಂಡ್ಲು
ಇವರ "ಕಾವ್ಯ ಕಸ್ತೂರಿ"

ಸ್ಮಿತಾ ಮೇಲ್ಕೋಟೆ
ಇವರ "ಮಂದಹಾಸ"

ಮಹಾಂತೇಶ್ ಸಿ.
ಇವರ "ಹಂಗ ಸುಮ್ನ್..."

ರೆಸಿಪಿ ಕೊಡ್ತೀರಾ!

ಈರುಳ್ಳಿ ಟೋಸ್ಟ್

ಬೇಕಾಗುವ ಸಾಮಗ್ರಿಗಳು

- ಬ್ರೆಡ್ ಒಂದು ಪೌಂಡ್, ಹೆಚ್ಚಿದ ಈರುಳ್ಳಿ 250 ಗ್ರಾಂ, ಹೆಚ್ಚಿದ ಹಸಿ ಮೆಣಸಿನ ಕಾಯಿ
- ಅರಿಸಿನಪುಡಿ ಕಾಲು ಚಮಚ, ಗರಂಮಸಾಲೆ ಪುಡಿ ಕಾಲು ಚಮಚ, ಎಣ್ಣೆ ಮೂರು ಚಮಚ
- ಹೆಚ್ಚಿದ ಕೊತ್ತಂಬರಿ ಸೊಪ್ಪು ಎರಡು ಚಮಚ, ಬೆಣ್ಣೆ 50 ಗ್ರಾಂ, ಉಪ್ಪು ಅರ್ಧ ಚಮಚ

ಮಾಡುವ ವಿಧಾನ

- ಬಾಣಲೆಯಲ್ಲಿ ಎಣ್ಣೆ ಬಿಸಿ ಮಾಡಿ ಈರುಳ್ಳಿ, ಹಸಿಮೆಣಸಿನಕಾಯಿ ಸೇರಿಸಿ ಈರುಳ್ಳಿ ಮೆತ್ತಗಾಗುವ ವರೆಗೂ ಬೇಯಿಸಿ.
- ಅರಿಶಿನ ಗರಂ ಮಸಾಲಾ,ಉಪ್ಪು,ಕೊತ್ತಂಬರಿ ಸೇರಿಸಿದ ತಕ್ಷಣ ಒಲೆಯಿಂದಿಳಿಸಿ. ಬ್ರೆಡ್ ಮೇಲೆ ಮಿಶ್ರಣ ಹರಡಿ.
- ಓವನ್ ನಲ್ಲಿ 10 ನಿಮಿಷ 160 ಡಿಗ್ರಿ ಶಾಖದಲ್ಲಿ ಬೇಯಿಸಿ (ಈರುಳ್ಳಿಯ ಜೊತೆ ವಿವಿಧ ತರಕಾರಿಕಳನ್ನೂ ಬಳಸಿ ಮಾಡಬಹುದು)

ಇನ್ನೂ ನೂರಾರು ರೆಸಿಪ್ಪಿಗಳಿಗೆ **www.sugamakannada.com** ಗೆ ಭೇಟಿಕೊಡಿ.

ಒಂದರಲ್ಲೊಂದು ಒಗಟು

೧. ಮೂರಕ್ಷರದ ಪದ ಎತ್ತರವಾಗಿದೆ
೨. ಮೊದಲೆರೆಡಕ್ಷರ ಗೋಪಿಯನ್ನು ಪ್ರೀತಿಯಿಂದ ಕರೆದಂತಿದೆ
೩. ಮೊದಲಿನ ಅಕ್ಷರಕೆ ಕೊನೆ ಅಕ್ಷರ ಸೇರಿ ಭಕ್ತ ಕುಂಬಾರನ ಹೆಸರನ್ನು ತಂದಿದೆ
೪. ಮೊದಲಕ್ಷರವ ಕೈಬಿಟ್ಟರೆ ಊರು ಸಿಗುತ್ತದೆ

ಉತ್ತರಕ್ಕೆ ಪುಟ ೮ ನೋಡಿ

ಶ್ರೀ ಹರಿ ಕೀರ್ತನ ...



ಹಾಡುವೆನು ಹಾಡುವೆನು ಹರಿಯ ನೋಡುತ
ಕುಣಿಯುವೆನು ಕುಣಿಯುವೆನು ಮೈಯ ಮರೆಯುತ

ಗೆಳೆಯ ಅರ್ಜುನನ ಸಾರಥಿಯ ಎದುರಲಿ
ನಿಲಿಸಿ ಮುಕುಂದನ ಮೂರುತಿಯ ಮನದಲಿ
ಮಲಿನವಾಗಿಹ ಮತಿಯ ತೊಳೆದು ಕ್ಷಣದಲಿ
ಒಲವ ನೀಡಿರುವ ಘನಶ್ಯಾಮನೆನುತಲಿ

ಶರಧಿಶಯನ ಲಕ್ಷ್ಮಿಸಖನು ಆದಿಮೂರುತಿ
ಪರಿಧಿ ಇರುವುದೇ ಅವನಮಹಾ ಮಹಿಮೆಗೆ
ನೆರೆದ ಜನರ ಪರಿವೆ ಇನ್ನು ನನಗೆ ಏತಕೆ
ಪುರದಲಿರುವ ಪೌರರೊಡನೆ ಕೂಡಿ ಗುಡಿಯಲಿ

ಭಕ್ತಮೀರ ಭಜನೆಯನು ವ್ಯಕ್ತಗೊಳಿಸುತ
ರಿಕ್ತಹಸ್ತ ನನ್ನ ಶಕ್ತಮಾಡು ಎನ್ನುತ
ಮುಕ್ತಿ ಮಾರ್ಗವನ್ನು ಅವನಲ್ಲಿ ಕಾಣುತ
ಯುಕ್ತಿ ಇಹುದು ಭಕ್ತಿಯಲ್ಲಿ ಎಂದುಸಾರುತ

ಹಾಡುವೆನು ಹಾಡುವೆನು ಹರಿಯ ನೋಡುತ
ಕುಣಿಯುವೆನು ಕುಣಿಯುವೆನು ಮೈಯ
ಮರೆಯುತ

-ಮಾಲು, ಅಡಿಲೈಡ್

ಜಾಣ ಕರ್ನಾಟಕ

೧. ಬೆಂಗಳೂರಿನ ಧರ್ಮಾಂಬುದಿ ಕೆರೆ ಇದ್ದ ಜಾಗದಲ್ಲಿ ಈಗ ಏನಿದೆ? ಈ ಕೆರೆಯನ್ನು ಕಟ್ಟಿಸಿದವರು ಯಾರು?

೨. ಆರ್. ಕೆ. ನಾರಾಯಣ್ ರವರ ಮಾಲ್ಗುಡಿ ಎಂಬ ಸ್ಥಳನಾಮಕ್ಕೆ ಕಾರಣ ಎಂದು ಹೇಳಲಾಗುವ ಬೆಂಗಳೂರಿನ ಎರಡು ಬಡಾವಣೆಗಳು ಯಾವುವು?

ಸರಿ ಉತ್ತರಕ್ಕೆ ಪುಟ ೧೫ ನೋಡಿ

ಒಂದರಲ್ಲೊಂದು ಒಗಟು – ಉತ್ತರ

೧.ಗೋಪುರ ೨.ಗೋಪು ೩.ಗೋರ ೪. ಪುರ

ಹಾಸ್ಯ ಚಿಲುಮೆ

ಸರ್ದಾರ್ ಉಡುಪಿ ಹೋಟೆಲ್ ಗೆ ಹೋಗಿ ದೋಸೆ ಆರ್ಡರ್ ಮಾಡಿ ಬರೀ ಪಲ್ಯ ತಿಂದು ದೋಸೆ ಬಿಟ್ಟ,ನಂತರ ಒಂದು ಸಮೋಸ ಆರ್ಡರ್ ಮಾಡಿ ಅದರಲ್ಲಿದ್ದ ತರಕಾರಿ ಪಲ್ಯ ಮಾತ್ರ ತಿಂದು ಮಿಕ್ಕಿದ್ದು ಬಿಟ್ಟ,ವಡೆ ಆರ್ಡರ್ ಮಾಡಿ ಗರಿಗರಿ ಎನ್ನುವ ಮೇಲಿನ ಪದರ ಬಿಡಿಸಿ ಒಳಗಿದ್ದ ಮೃದುವಾದ ಭಾಗ ಮಾತ್ರ ತಿಂದ. ಕುತೂಹಲ ತಡೆಯಲಾರದೆ ಮಾಣಿ ಕೇಳಿದ "ಯಾಕೆ ಸಾರ್ ಹೀಗೆ ಮಾಡ್ತಿದ್ದೀರಿ?"ಎಂದು.

ಅದಕ್ಕೆ ಸರ್ದಾರ್

"ನನಗೆ ಆರೋಗ್ಯ ಸರಿ ಇಲ್ಲ, ಡಾಕ್ಟರ್ ಹೇಳಿದ್ದಾರೆ ಹೊರಗಡೆ ತಿಂಡಿ ತಿನ್ನ ಬೇಡ ಅಂತ"

ಮತ್ತಷ್ಟು ಹಾಸ್ಯಕ್ಕೆ ಭೇಟಿ ಕೊಡಿ – ಸುಗಮ ಕನ್ನಡ ಕೂಟ

ಪದ-ಪುಂಜ (ಶಾನೆ ತಲೆ ಕೆಡಿಸ್ಕೋಬೇಡಿ)

ಕೆಳಕಂಡ ವಾಕ್ಯಕ್ಕೆ ಅರ್ಥಬರುವಂತೆ ಬಿಟ್ಟ ಜಾಗ ತುಂಬುವ ಹಾಗೆ ಉತ್ತರ ಹುಡುಕಿ

೧. ಒಳ್ಳೆಯದಾಗಲಿ ಎಂದು ಆಶೀರ್ವದಿಸಿದಾಗಲೆಲ್ಲ ಶಿವನು ಜೊತೆಗಿರುತ್ತಾನೆ.

೨. ಅನಾದಿ ಕಾಲದಲ್ಲಿ ಹಾಕಿದ್ದೇನು ಭದ್ರವಾದ ಈ ಅಡಿಪಾಯ?

೩. ಆಹಾ! ವತ್ಸಲಾಳ ಬಗ್ಗೆ ಅದೇನು ಮಮತೆ.

೪.ಅತ್ತ ಹೋಗಿ ಇತ್ತ ಹಿಂದಿರುಗಿ ಬರುವಷ್ಟರಲ್ಲಿ ಕಾಡೇ ಹೊಸದಾಗಿ ಬಿಟ್ಟಿತ್ತು.

೫. ಹೂವಿನ ಬೆಲೆ ಎಷ್ಟಮ್ಮ ಎಂದರೆ, ಬಲಿ ತೆಗೆದುಕೊಳ್ಳುವ ದೇವತೆಗಾದರೆ ೨೦ ರೂಪಾಯಿ ಎಂದಳಲ್ಲಾ! ಇದ್ಯಾವ ಲೆಕ್ಕವಪ್ಪ.

ಉತ್ತರ: ಛೇ. ಈ ಸುದ್ದಿಯನ್ನು ಕೇಳಿ ನಿಮಗೆ ಮರ್ಯಾದೆಯೇನೂ ಹೋಗುವುದಿಲ್ಲ. ಇನ್ನೂ, ಹೊರಗೆ ಸುತ್ತಾಡಲು ಸಹಾಯವಾಗಬಹುದು.

ನಿಮ್ಮ ಉತ್ತರ ಈಮೈಲ್ ಮಾಡಿ, (horanadachilume@gmail.com)

ಜೂನ್ 25 ತಮ್ಮ ಉತ್ತರ ಕಳುಹಿಸಲು ಕಡೆಯ ದಿನಾಂಕ.

ಮೇ ಪದ ಪುಂಜ – ಉತ್ತರ

ಕಳೆದ ತಿಂಗಳ ಪದ ಪುಂಜಕ್ಕೆ ಸರಿಯಾಗಿ ಉತ್ತರಿಸಿದವರು

- ಶುಭಶ್ರಿ, ಸಿಡ್ನಿ
- ರಾಜಿ ಜಯದೇವ್, ಸಿಡ್ನಿ
- ಸುಮ ಅಶೋಕ್, ಸಿಡ್ನಿ
- ರಾಘವೇಂದ್ರ ಮೂರ್ತಿ, ಬೆಂಗಳೂರು
- ಬಿ.ಆರ್. ವತ್ಸಲಾ ದ್ವಾರಕನಾಥ್, ಕೆ.ಜಿ.ಎಫ್
- ಬಿ. ಆರ್. ಪುಷ್ಪವಲ್ಲಿ ಚಂದ್ರಶೇಖರ್, ಕೆಂಗೇರಿ ಉಪನಗರ

ಮೇ ತಿಂಗಳ ಪದಪುಂಜದ ಉತ್ತರ

೧.ಚಕ್ರವರ್ತಿಯೋ, ಕೈ ಕಡಗದಂತ ಜನಪ್ರಿಯ ಸಿಹಿ ತಿನಿಸೋ?

ಜ	ಹಾಂ	ಗೀ	ರ್

೨.ಬರೀ ಹೀಗೆ ಮಾಡಿ ಹಾಗೆ ಮಾಡಿ ಎಂದು ಹೇಳುವುದಷ್ಟೇ ಆದರೂ, ಚಿತ್ರದ ಗೆಲುವಿಗೆ ಇವನೇ ಮುಖ್ಯ ಕಾರಣ.

ನಿ	ರ್ದೇ	ಶ	ಕ

೩ ಹಣೆಯ ಮೇಲೆ ಬಂದು ಕುಳಿತು ತೂಗಾಡುವುದೇನು?

ಮುಂ	ಗು	ರು	ಳು

೪ ಧರ್ಮರಾಯನಿಗೆ ಪ್ರಶ್ನೆಗಳನ್ನು ಕೇಳಿದವ.

ಯ	ಕ್ಷ

೫. ಬಳ್ಳಿಯಂತೆ ಹೆಸರೇನೋ ಇಟ್ಟುಕೊಂಡಳು ಹುಡುಗಿ, ಆದರೆ ಗಿಡ್ಡವಾಗಿಯೇ ಉಳಿದಳು.

ಲ	ತ

೬. ಅಡಿಕೆಗೆ ಹತ್ತಿರವೇ, ಮೊದಲಿನಿಂದಲೂ ನಡೆದುಕೊಂಡ ಪದ್ಧತಿ.

ವಾ	ಡಿ	ಕೆ

ಉತ್ತರ: ಬಡವರಿಗೆಟುಕದ ಕಡಲೇಕಾಯಿಯ ಊರಿನಲ್ಲಿ ಒಳಹೊಕ್ಕು ನೋಡುವಂತಹದೇನು?

ಗು	ಹಾಂ	ತ	ರ್ದೇ	ವಾ	ಲ	ಯ

ರಂಗೋಲಿ ಬುಕ್

ನಿಮ್ಮ ರಂಗೋಲಿ ಇಲ್ಲಿ ಕಾಣಬೇಕೇ? ಇ-ಮೇಲ್ ಮಾಡಿ: horanadachilume@gmail.com

ಮತ್ತಷ್ಟು ರಂಗುರಂಗಿನ ರಂಗೋಲಿ ಮುಂದಿನ ಸಂಚಿಕೆಯಲ್ಲಿ

ರಂಗವಲ್ಲಿ

ಭಾರತೀಯ ಸಂಸ್ಕೃತಿಯಲ್ಲಿ, ನಿಯಮ ಪ್ರಕಾರ ಮಾಡುವ ಅನೇಕ ಕಾರ್ಯಗಳಲ್ಲಿ ರಂಗೋಲಿ ಬಿಡಿಸುವುದೂ ಒಂದು. ಸಾಮಾನ್ಯವಾಗಿ ಮನೆಯ ಹೆಣ್ಣು ಮಕ್ಕಳು ತಮ್ಮ ದೈನಂದಿನ ಚಟುವಟಿಕೆಯ ಒಂದು ಅಂಗವಾಗಿ ರಂಗೋಲಿ ಹಾಕುವುದನ್ನು ರೂಡಿಸಿಕೊಂಡಿರುತ್ತಾರೆ. ಮನೆಯ ಮುಂದೆ ರಂಗೋಲಿ ಇದ್ದರೆ ಅದೆಷ್ಟು ಲಕ್ಷಣ!

ಕೇವಲ ಸಂಸ್ಕೃತಿ ಅಷ್ಟೇ ಅಲ್ಲದೆ, ರಂಗೋಲಿ ಬಿಡಿಸುವುದರಿಂದ, ರೇಖಾ ಗಣಿತ ಉತ್ತಮಪಡಿಸಿಕೊಳ್ಳುವಲ್ಲಿ ಸಹಕಾರಿ. ಅದೆಷ್ಟು ಚುಕ್ಕಿಗಳು, ಎಂತೆಂತಹ ರೇಖೆಗಳು, ತರಹಾವರಿ ನಮೂನೆಗಳು. ಅಬ್ಬ! ರಂಗೋಲಿ ನಿಮಗೆ ಬೆರಗು ಮಾಡಿಲ್ಲವೇ? ಒಮ್ಮೆ ರಂಗೋಲಿಯಲ್ಲಿ ಕೈ ಆಡಿಸಿ ನೋಡಿ, ಒಂದು ಕಾವ್ಯವೇ ಹುಟ್ಟೀತು ... ▪

NRI SEVA
Educational, Legal, financial, Health, Reality management services Liaison work, Tours & Travels
visit www.nriseva.in or contact
Singapore – Harish +6598691760
Canada – SowmyaKeshava – 00968-99226928
Australia – Nagendra A- 0061401193852
Contact Mr. Nagendra EMAIL 0401193852



ಪಾತರಗಿತ್ತಿಯರ ನಲಿದಾಟ - ೨೧-೧೧ - ರಚನೆ- ಪುಷ್ಪವಲ್ಲಿ ಚಂದ್ರಶೇಖರ್, ಕೆಂಗೇರಿ ಉಪನಗರ

ಕರ್ನಾಟಕವನ್ನಾಳಿದ ರಾಜವಂಶಗಳು – ಭಾಗ ೭

ಲೇಖಕರು:
ನಾಗಶೈಲ ಕುಮಾರ್

ಶ್ರೀಮಂತ ಸಾಮ್ರಾಜ್ಯ

ಪಂಪಾ ವಿರೂಪಾಕ್ಷ ಪಂಪಾಪುರಿಯ ಆರಾಧ್ಯದೈವ, ಭರತ ಖಂಡದ ಉತ್ತರದಲ್ಲಿ ವಾರಣಾಸಿಗೆ ವಿಶ್ವೇಶ್ವರನೇ ಅಧಿಪತಿಯಾದಂತೆ, ದಕ್ಷಿಣದ ಪಂಪಾಪುರಕ್ಕೆ ವಿರೂಪಾಕ್ಷನೇ ಅರಸು. ತುಂಬಿ ಹರಿಯುವ ಪಂಪಾನದಿಯ ದಡದಲ್ಲಿ, ಮತಂಗ ಪರ್ವತದ ಮಡಿಲಲ್ಲಿ, ಹಸಿರನುಟ್ಟು ನಲಿಯುವ ಸುಂದರ ಪ್ರಕೃತಿಯ ಒಡಲಲ್ಲಿ ವಿಶಾಲವಾಗಿ ಹಬ್ಬಿತ್ತು ವಿರೂಪಾಕ್ಷಪುರ. ಹೊಸದಾಗಿ ಸ್ಥಾಪಿತವಾದ ಹಿಂದೂಸಾಮ್ರಾಜ್ಯದ ಅರಸರು ವಿರೂಪಾಕ್ಷಪುರವನ್ನು ರಾಜಧಾನಿಯನ್ನಾಗಿಸಿಕೊಂಡು ವಿಜಯನಗರವೆಂದು ಕರೆದಿದ್ದರು. ಅನಾದಿಕಾಲದಿಂದಲೂ ಪುಣ್ಯಕ್ಷೇತ್ರವೆಂದು ಪ್ರಸಿದ್ಧಿಯಾಗಿ, ಹರಿಹರ, ರಾಘವಾಂಕಾದಿ ಕವಿಗಳ ಆರಾಧ್ಯ ದೇವರ ನೆಲೆಯಾದ ವಿಜಯನಗರ ಇಂದು ಭೂಮಂಡಲದ ಇತರ ಮಹಾನಗರಗಳೇ ನಾಚುವಂತೆ ಬೆಳೆದು ನಿಂತಿದೆ. ನೂರಾರು ಸಹಸ್ರಗಳ ಜನಸಂಖ್ಯೆ, ಸಮಸ್ತ ಪ್ರಜೆಗಳಿಗೂ ಅತ್ಯುತ್ಕೃಷ್ಟ ಜೀವನ ಸೌಲಭ್ಯ, ಭವ್ಯವಾದ ಅರಮನೆಗಳು, ಸುಂದರ ಭವನಗಳು, ಜನರ ಶ್ರೇಣಿಗೆ ತಕ್ಕಂತೆ ನಿವಾಸಗಳು, ಸುಂದರ ದೇಗುಲಗಳು, ಕಲ್ಯಾಣ ಮಂಟಪಗಳು, ಅಶ್ವಶಾಲೆ, ಗಜಶಾಲೆ, ಎಲ್ಲವೂ ಅಲ್ಲಿತ್ತು. ನಗರದ ಉದ್ಯಾನಗಳಿಗೆ ನೀರುಣಿಸಲು ಕಾಲುವೆಗಳು ತುಂಬಿ ಹರಿಯುತ್ತಿತ್ತು. ಕೆರೆ ಕಟ್ಟೆಗಳು, ಸುಂದರವಾದ ಕಲ್ಯಾಣಿಗಳು, ಸ್ನಾನದ ಕೊಳಗಳು ಜಲ ಸಮೃದ್ಧತೆಯ ದ್ಯೋತಕವಾಗಿದ್ದವು. ವಿವಿಧ ದೇಶಗಳಿಂದ ಬಂದ ಯಾತ್ರಿಕರು, ವರ್ತಕರು "ಇಂತಹ ನಗರವು ಮತ್ತೊಂದು ಇರುವುದನ್ನು ಕೇಳಿಲ್ಲ, ಅಥವಾ ಇಂತಹ ನಗರವನ್ನು ಪ್ರಪಂಚದ ಬೇರೆಲ್ಲೂ ಕಂಡಿಲ್ಲ" ಎಂದು ತಮ್ಮ ದೇಶಗಳಿಗೆ ಹಿಂದಿರುಗಿದ ನಂತರ ಬಣ್ಣಿಸೀ, ಬಣ್ಣಿಸೀ, ಈ ನಗರವನ್ನೂ, ಅದರ ಸಂಪತ್ತನ್ನೂ ಕಾಣಲು ಬರುವ ಹೊರದೇಶೀಯರ ಸಂಖ್ಯೆ ಹೆಚ್ಚಾಗಿತ್ತು. ರಾಜ್ಯದ ಪಶ್ಚಿಮಕ್ಕಿದ್ದ ಅರಣ್ಯದ ಉತ್ಪನ್ನಗಳು, ಸಮೃದ್ಧಿಯಾಗಿ ಬೆಳೆಯುತ್ತಿದ್ದ ವ್ಯವಸಾಯೋತ್ಪನ್ನಗಳು, ಬಯಲು ಸೀಮೆಯ ಶ್ರೀಗಂಧ, ವಸ್ತ್ರಾಭರಣಗಳು, ಖನಿಜಗಳು, ಹೀಗೆ ಅನೇಕ ವಸ್ತುಗಳು ಅಪಾರ ಪ್ರಮಾಣದಲ್ಲಿ, ರಾಜ್ಯದಲ್ಲಿದ್ದ ನೂರಾರು ಬಂದರುಗಳ ಮೂಲಕ ಹೊರದೇಶಗಳಿಗೆ ಮಾರಾಟವಾಗಿ, ರಾಜ್ಯದ ಬೊಕ್ಕಸಕ್ಕೆ ಹಣದ ಹೊಳೆಯನ್ನೇ ಹರಿಸಿದ್ದವು. ಅರಬ್ಬರ ದೇಶಗಳಿಂದ ಉತ್ತಮ ತಳಿಯ ಕುದುರೆಗಳು, ಚೀನಾ ದೇಶದರೇಷ್ಮೆ, ಕರಕುಶಲ ಸಾಮಗ್ರಿಗಳು, ಪರಂಗಿಗಳಿಂದ (ಬಿಳಿಯರೆಲ್ಲರನ್ನೂ ಪರಂಗಿಗಳೆಂದೇ ಕರೆಯುತ್ತಿದ್ದರು) ಶಸ್ತ್ರಾಸ್ತ್ರಗಳೂ ರಾಜ್ಯಕ್ಕೆ ಬರುತ್ತಿದ್ದವು.

ಬರಿದೆ ನಗರ ಮಾತ್ರವಲ್ಲ, ಅಲ್ಲಿ ವಾಸಿಸುತ್ತಿದ್ದ ಜನರೂ ಅಪಾರ ಸಂಪತ್ತನ್ನೇ ಹೊಂದಿದ್ದರು. ಹೆಂಗಸರು ಬಣ್ಣಬಣ್ಣದ ಸೀರೆ ರವಿಕೆಗಳೂ, ಶಿರದಲ್ಲಿ, ಕಿವಿಗಳಿಗೆ, ಆಭರಣಗಳನ್ನು, ಉಂಗುರ, ಬಳೆ, ಮೂಗುತಿ, ತೋಳಬಂದಿ, ಒಡ್ಯಾಣ, ಕಡಗ, ಕಂಠಿ ಇವೆಲ್ಲವನ್ನೂ ತೊಡುತ್ತಿದ್ದರು. ಗಂಡಸರೇನೂ ಆಭರಣ ತೊಡುವುದರಲ್ಲಿ ಹಿಂದೆ ಬೀಳುತ್ತಿರಲಿಲ್ಲ, ಅವರೂ ಸಹ ಉಂಗುರ, ಬಳೆ, ಕಡಗ, ಕಿವಿಗಳಿಗೆ ಉಂಗುರಗಳನ್ನೂ ತೊಡುತ್ತಿದ್ದರು. ಭತ್ತ, ಜೋಳ, ಮುಂತಾದ ಆಹಾರ ಧಾನ್ಯಗಳನ್ನು ಬೆಳೆಯುತ್ತಿದ್ದರು. ಕಬ್ಬು ಬೆಳೆದು ಬೆಲ್ಲ, ಸಕ್ಕರೆ ತಯಾರಿಸುತ್ತಿದ್ದರು. ಹತ್ತಿ ಬೆಳೆದು ಮನೆಗಳಲ್ಲಿ ನೂಲು ತೆಗೆದು ವಸ್ತ್ರ ತಯಾರಿಸುತ್ತಿದ್ದರು. ನೆಲಗಂದಾಯ, ಅಂಗಡಿ, ಮನೆ, ಹುಲ್ಲುಗಾವಲು, ಸಂತೆ, ಹೀಗೆ ಅನೇಕ ತೆರಿಗೆಗಳನ್ನು ನೀಡುತ್ತಿದ್ದರೂ ಕೂಡ, ಜನರು ಆರ್ಥಿಕವಾಗಿ ಸಂಪನ್ನರಾಗಿದ್ದರು.

ವಿಜಯನಗರ ಇಷ್ಟೆಲ್ಲ ಸಂಪದ್ಭರಿತವಾಗಲು ಹಲವಾರು ದಶಕಗಳ ಉತ್ತಮ ಆಡಳಿತವೇ ಕಾರಣ, ಸಂಗಮ ವಂಶದ ಹಕ್ಕ, ಬುಕ್ಕ, ೨ನೇ ಹರಿಹರ, ದೇವರಾಯ II, ಸಾಳುವ ನರಸಿಂಹ, ಮುಂತಾದವರ ಸಮರ್ಥ ರಾಜ್ಯಭಾರದ ನಂತರ ೧೫೦೯ರಲ್ಲಿ ಶ್ರೀ ಕೃಷ್ಣದೇವರಾಯನು ಪಟ್ಟಕ್ಕೆ ಬಂದಿದ್ದ. ಸಿಂಹಾಸನವೇರಿದ ಸಮಯದಿಂದಲೇ ರಾಯನ ಸಮಯ ಯುದ್ಧಗಳಲ್ಲೇ ಕಳೆದುಹೋಗಿದ್ದರೂ, ರಾಜ್ಯದ ಅಭಿವೃದ್ಧಿ, ಜನತೆಗೆ ಅಗತ್ಯ ಸೌಲಭ್ಯಗಳು ಒದಗಿಸುವುದರಲ್ಲಿ ಎಲ್ಲರಿಗಿಂತ ಒಂದು ಕೈಮೇಲೇ ಇದ್ದ.

ರಾಜಧಾನಿಯಲ್ಲಿ ಹೊಸದಾಗಿ ಕೃಷ್ಣಸ್ವಾಮಿ, ವಿಠ್ಠಲಸ್ವಾಮಿ ದೇವಾಲಯಗಳನ್ನು ನಿರ್ಮಿಸುದುದೇ ಅಲ್ಲದೆ ರಾಮಸ್ವಾಮಿ, ವಿರೂಪಾಕ್ಷ ದೇವಾಲಯಗಳ ವಿಸ್ತರಿಸಿದ. ಲಕ್ಷ್ಮೀ ನರಸಿಂಹನ ವಿಗ್ರಹವನ್ನು ಸ್ಥಾಪಿಸಿದ. ಸ್ವತಃ ವೈಣಿಕನಾಗಿ, ವಿದ್ವಾಂಸನಾಗಿ, 'ಅಮುಕ್ತಮಾಲ್ಯದ' ಮತ್ತು 'ಜಾಂಬವತೀ ಕಲ್ಯಾಣ', ಕೃತಿಗಳನ್ನು ರಚಿಸುದುದೇ ಅಲ್ಲದೆ, ಅಲ್ಲಸಾನಿ ಪೆದ್ದನ, ತೆನಾಲಿ ರಾಮಕೃಷ್ಣ, ತಿಮ್ಮಣ್ಣ, ಮುಂತಾದ ತೆಲುಗು ಹಾಗೂ ಕನ್ನಡದ ಕವಿಗಳಿಗೆ ಆಶ್ರಯ ನೀಡಿದ್ದ. ವ್ಯಾಸತೀರ್ಥರು ಆಸ್ಥಾನಗುರುಗಳಾದರೆ, ಚೈತನ್ಯ ಮಹಾಪ್ರಭು, ವಲ್ಲಭಾಚಾರ್ಯ ಮುಂತಾದವರು ಅಹ್ವಾನಿತರಾಗಿ ಗೌರವಿಸಲ್ಪಟ್ಟಿದ್ದರು. ಹಿಂದೂ ಧರ್ಮದ ಯಾವುದೇ ಪಂಥವಿರಲಿ ಅದರ ಅಭ್ಯುದಯಕ್ಕೆ ಪ್ರಾಮುಖ್ಯತೆ ಇರುತ್ತಿತ್ತು. ಅಷ್ಟೇ ಏಕೆ ಇಸ್ಲಾಂ ಮತ್ತು ಕ್ರೈಸ್ತ ಧರ್ಮಕ್ಕೆ ಕೂಡ ಮರ್ಯಾದೆ ಸಿಗುತ್ತಿತ್ತು. ರಾಯನ ಕಾಲವು ಸಾಂಸ್ಕೃತಿಕವಾಗಿ ಕೂಡ ಶ್ರೇಷ್ಠ ಕೊಡುಗೆಯನ್ನು ನೀಡಿತು.

ಮುಂದಿನ ಪುಟ ನೋಡಿ ...

ಕೃಷ್ಣದೇವರಾಯ ಹಿಂದಿನ ದಿನವಷ್ಟೇ ಯುದ್ಧರಂಗದಿಂದ ಹಿಂದಿರುಗಿ ಅಯಾಸದಿಂದ ಬಳಲಿದ್ದರೂ, ತನ್ನ ದಿನನಿತ್ಯದ ಕ್ರಮಗಳನ್ನು ತಪ್ಪಿಸದೆ, ಸೂರ್ಯನು ಉದಯಿಸಲು ಇನ್ನೂ ತಾಸೆರಡು ಇರುವಾಗಲೇ ವ್ಯಾಯಾಮಶಾಲೆಗೆ ಆಗಮಿಸಿದ್ದ. ರಾಜನ ಬರವನ್ನು ಎದುರು ನೋಡುತ್ತಿದ್ದ ಜಟ್ಟಿಗಳಿಬ್ಬರು ಹದವಾಗಿ ಕಾಸಿದ್ದ ಎಳ್ಳೆಣ್ಣೆಯನ್ನು ಕಂಚಿನ ಪಾತ್ರೆಗಳಲ್ಲಿ ತುಂಬಿಸಿಕೊಂಡು ಕಾಯುತ್ತಿದ್ದರು. ಅಂಗರಕ್ಷಕರು ಎಣ್ಣೆಯ ಹದವನ್ನು ಪರಿಶೀಲಿಸಿ, ತಲೆಯಾಡಿಸಿ ಒಪ್ಪಿಗೆ ನೀಡಿದ ನಂತರ ವ್ಯಾಯಾಮ ಶಾಲೆಯ ಒಂದು ಬದಿಯಲ್ಲಿ ವಿಶೇಷವಾಗಿ ನಿರ್ಮಿಸಿದ್ದ ಜಗಲಿಯ ಮೇಲೆ ಕುಳಿತ ರಾಜನ ನೆತ್ತಿಗೆ ಎಣ್ಣೆಯನ್ನು ಒತ್ತಿ, ಭುಜ, ಬೆನ್ನು, ತೋಳ್ಗಳು, ಎದೆ, ಅಂಗೈ, ತೊಡೆ, ಮೀನಖಂಡಗಳು, ಹಿಮ್ಮಡಿ, ಪಾದ ಹೀಗೆ ಸಂಪೂರ್ಣವಾಗಿ ರಾಯನ ಮೈಗೆ ಎಣ್ಣೆಯನ್ನು ಹಚ್ಚಿ, ಮಾಂಸಖಂಡಗಳ ನೀವುತ್ತಾ, ರಾಜನ ಮುಖಚಹರೆಯ ಆಧಾರದ ಮೇಲೆ ನೀಯುವುದರ ತೀವ್ರತೆಯನ್ನು ಹೆಚ್ಚಿಸುವುದು, ತಗ್ಗಿಸುವುದು ಮಾಡುತ್ತಾ, ಅರ್ಧ ತಾಸು ಅಂಗಮರ್ಧನ ಮಾಡಿದರು. ರಾಯನು ಕೈ ಸೂಚನೆಯಲ್ಲಿಯೇ ನಿಲ್ಲಿಸಲು ತಿಳಿಸಿದ ಕೂಡಲೇ ನಡುಬಗ್ಗಿಸಿ ಹಿಂದೆ ಸರಿದರು ಜಟ್ಟಿಗಳು.

ಆ ವೇಳೆಗೆ ವ್ಯಾಯಾಮ ಶಾಲೆಯಲ್ಲಿಯೇ ಇರುತ್ತಿದ್ದ ಸ್ತ್ರೀಯರು ಆವರಣವನ್ನು ಸ್ವಚ್ಚಗೊಳಿಸಿ, ರಾಯನ ಮುಂದಿನ ಕಾರ್ಯಕ್ರಮಗಳಾದ ವ್ಯಾಯಾಮ, ಅಂಗಸಾಧನೆ, ಕುಸ್ತಿಗಳಿಗೆ ಬೇಕಾದ ಸಾಮಗ್ರಿಗಳನ್ನು ಅಣಿಗೊಳಿಸಿದ್ದರು. ಮಣ್ಣಿನಿಂದ ಮಾಡಿದ್ದ ಭಾರವಾದ ಗುಂಡುಗಳನ್ನು ಬಳಸಿ ಕೆಲಕಾಲ ವ್ಯಾಯಾಮ, ಅಂಗಸಾಧನೆ, ಜಟ್ಟಿಗಳ ಜೊತೆ ಕುಸ್ತಿ, ಕಡೆಯಲ್ಲಿ ಕುದುರೆ ಸವಾರಿ ಮಾಡಿದರೆ, ಮೈಗೆ ಧಾರಾಳವಾಗಿ ಹಚ್ಚಿದ್ದ ಎಣ್ಣೆಯಲ್ಲವೂ ಇಳಿದು ಬೆವರು ಧಾರಾಕಾರವಾಗಿ ಸುರಿದಿರುತ್ತಿತ್ತು. ದೊರೆ ಅಲ್ಲಿಂದ ಹೊರಟರೆಂದರೆ ಅಲ್ಲಿದ್ದವರೆಲ್ಲರಿಗೂ ಅಂದಿನ ಒಂದು ಗಂಡಾಂತರ ಕಳೆದಂತೆ. ಏಕೆಂದರೆ ಕೃಷ್ಣದೇವರಾಯನ ಸಿಟ್ಟು ಅಲ್ಲಿದ್ದವರೆಲ್ಲರಿಗೂ ಚೆನ್ನಾಗಿ ಗೊತ್ತಿತ್ತು. ಯಾವುದರಲ್ಲೂ ಸ್ವಲ್ಪವೂ ಹೆಚ್ಚು ಕಡಿಮೆಯಾಗಬಾರದು, ಎಲ್ಲೂ ಕೊಳಕಿರಬಾರದು, ಬೇಕಾದ್ದು ಕೂಡಲೇ ಸಿಗಬೇಕು, ಹೀಗೆ ಯಾವಾಗ ರಾಯನಿಗೆ ಸಿಟ್ಟು ಬರುತ್ತದೋ ಎಂದು ಎಲ್ಲರೂ ಎಚ್ಚರದಿಂದಿರುತ್ತಿದ್ದರು.

ಸಾಮ್ರಾಜ್ಯದಲ್ಲಿ ಅರಸನ ಮುಂಗೋಪಕ್ಕೆ ಬಲಿಯಾಗದ ಏಕೈಕ ವ್ಯಕ್ತಿಯೆಂದರೆ ಮಹಾಮಂತ್ರಿ ತಿಮ್ಮರಸು ಮಾತ್ರ. ಅಪ್ಪಾಜಿಯೆಂದೇ ಕರೆಯುತ್ತಿದ್ದ ಮಹಾಮಂತ್ರಿಯ ಬಗ್ಗೆ ಅಪಾರ ಗೌರವ, ವಿಶ್ವಾಸ, ಪ್ರೀತಿ, ಜೊತೆಗೆ ಭಯವೂ ಇತ್ತು. ಕೃಷ್ಣದೇವರಾಯನ, ಜೀವ, ಜೀವನ, ಸಿಂಹಾಸನ, ಯಶಸ್ಸು ಎಲ್ಲವೂ ತಿಮ್ಮರಸುವಿನ ಋಣದಲ್ಲಿತ್ತು. ಮಹಾರಾಜನಿಗೆ ಬೇಕಾದ ಎಲ್ಲಾ ಗುಣಗಳೂ ಅರಸನಿಗಿಂತ ಹೆಚ್ಚಾಗಿ ಮಹಾಮಂತ್ರಿಯಲ್ಲೇ ಇದ್ದರೂ, ತಿಮ್ಮರಸು ಮಾತ್ರ ಸಮ್ರಾಜ್ಯದ ಅತ್ಯಂತ ವಿಧೇಯ ಸೇವಕ ಎಂದರೆ ತಪ್ಪಾಗಲಾರದು.

ಶುಭ್ರ ಶ್ವೇತ ವರ್ಣದ ನವಿರಾದ ರೇಷಿಮೆಯ ವಸ್ತ್ರವನ್ನು ಧರಿಸಿ, ಬಗೆಬಗೆಯ ವಜ್ರ ವೈಢೂರ್ಯಗಳಿಂದ ಶೋಭಿಸುವ ಕಿರೀಟ ಧರಿಸಿದ ಕೃಷ್ಣದೇವರಾಯ, ಪಟ್ಟಮಹಿಷಿ ತಿರುಮಲಾಂಬೆ, ಮಹಾರಾಣಿ ಚೆನ್ನಾದೇವಿ ಮತ್ತು ರಾಣಿ ಜಗನ್ಮೋಹಿನಿಯರೊಡನೆ ಪಂಪಾವಿರೂಪಾಕ್ಷನಿಗೆ ಪೂಜೆ ಸಲ್ಲಿಸಿ, ರಾಜ್ಯದ ಆಡಳಿತದ ಪ್ರಮುಖ ಕೇಂದ್ರಗಳಿರುವ ಆವರಣಕ್ಕೆ ಬಂದ. ಅನೇಕ ಅಧಿಕಾರಿಗಳು, ಕೈ ಕೆಳಗಿನವರು, ಸೈನ್ಯದ ದಂಡನಾಯಕರು, ಗ್ರಾಮಗಳಿಂದ ಬಂದಿದ್ದ ತೋಟಿ, ತಳವಾರ, ನೀರಗಂಟಿಗಳು, ಹೀಗೆ ಎಲ್ಲಾ ಹಂತದವರೂ ಅಲ್ಲಿ ನೆರೆದು, ರಾಜ್ಯದ ಅಭ್ಯುದಯದ ಕಾಯಕ ನಿರಾಂತಕವಾಗಿ ನಡೆದಿತ್ತು.

‘‘ಮಹಾಮಂತ್ರಿಗಳೆ, ನನ್ನ ಪಾಲಿಗೆ ಏನಾದರೂ ಕೆಲಸ ಉಳಿಸಿದ್ದೀರೋ, ಅಥವಾ ಎಂದಿನಂತೇ ಇಂದು ಕೂಡ ನಾನು ಉತ್ಸವಮೂರ್ತಿಯಾಗಿ ಸುತ್ತುವುದಷ್ಟೆ ಉಳಿದಿದೆಯೋ’’ ರಾಯನು ಛೇಡಿಸುವಂತೆ ಮಾತನಾಡುತ್ತಾ, ‘‘ನೀವು ಹೀಗೇ ಮಾಡುತ್ತಿದ್ದರೆ ನಾನು ರಾಜಧಾನಿಗೆ ಬರುವುದನ್ನೇ ನಿಲ್ಲಿಸಿ, ಯುದ್ಧಗಳನ್ನು ಮಾಡಿಕೊಂಡು ಸಂಚಾರ ಮಾಡಿಕೊಂಡಿರಬೇಕಾಗುತ್ತದೆ ಅಷ್ಟೇ.’’ ಎಂದನು.

‘‘ಎಂತಹ ಮಾತನಾಡಿದಿರಿ ಪ್ರಭು, ನಾನು ನಿಮ್ಮ ಸೇವಕ, ಈ ಮಹಾ ಹಿಂದೂ ಸಾಮ್ರಾಜ್ಯದ ಸೇವಕ ಅಷ್ಟೇ, ನೀವು ನುಡಿದುದನ್ನು ಆಚರಣೆಗೆ ತರುವವನು ನಾನು. ಸದಾಕಾಲ ಸಾಮ್ರಾಜ್ಯದ ರಕ್ಷಣೆ, ಪ್ರಜೆಗಳ ಹಿತ, ಇವುಗಳನ್ನೇ ಕುರಿತು, ಚಿಂತಿಸುವವರು, ಹೋರಾಡುವವರು ನೀವು. ನಿಮ್ಮ ನೆರಳಾಗಿ ನಾನಿರುವೆನಷ್ಟೇ. ನಿಮ್ಮಂತಹ ಧೀಮಂತ, ಉದಾತ್ತ, ಧರ್ಮರಕ್ಷಕ, ಅರಿಭಯಂಕರ, ವ್ಯಕ್ತಿಯನ್ನು ರಾಜನನ್ನಾಗಿ ಪಡೆದಿರುವುದು, ಬರೀ ಸಾಮ್ರಾಜ್ಯ ಮಾತ್ರವಲ್ಲ ಇಡೀ ಭರತಖಂಡವೇ ಹೆಮ್ಮೆಪಡುವ ವಿಷಯ’’.

‘‘ ಅಪ್ಪಾಜಿ’’, ಎಲ್ಲರಿರುವಾಗ ಮಹಾಮಂತ್ರಿ ಎಂದು ಸಂಭೋದಿಸುತ್ತಿದ್ದ ರಾಯನು, ತಾವಿಬ್ಬರೇ ಇರುವಾಗ ಸಲುಗೆಯಿಂದ ಅಪ್ಪಾಜೀ, ಅಥವಾ ಸಲುಗೆಯಿಂದ ’ಸಾಳ್ವ ತಿಮ್ಮ’ ಎಂದು ಕರೆಯುತ್ತಿದ್ದುದೂ ಉಂಟು, ಅಷ್ಟೇ ಅಲ್ಲ ತಂದೆಯಂತೆಯೇ ತಿಳಿದಿದ್ದನು ಕೂಡ. ‘‘ವೃಥಾ ನನ್ನನ್ನೇಕೆ ಹೊಗಳುವಿರಿ, ನೀವಿಲ್ಲದೇ ನನ್ನ ಬದುಕೇ ಇರುತ್ತಿರಲಿಲ್ಲ, ಈ ನನ್ನ ವಿಜಯನಗರ ಸಾಮ್ರಾಜ್ಯವೆಂಬುದೊಂದು ದೇಹವಾದರೆ, ಅದರ ಬೆನ್ನೆಲುಬೇ ನೀವು.’’

ಹಾಗೆಯೇ ಮಾತನಾಡುತ್ತಾ ಕೃಷ್ಣದೇವರಾಯ, ತಿಮ್ಮರಸು ಇಬ್ಬರೂ ಹೇಮಕೂಟ ಪರ್ವತದ ಮಂದಿರಗಳ ನಡುವೆ ಬಂದಿದ್ದರು. ಅಲ್ಲಿಂದ ಕಾಣುತ್ತಿದ್ದ, ಪಂಪಾಪುರಿಯ ವಿಹಂಗಮ ನೋಟವನ್ನು ನೋಡುತ್ತಾ ಮೈಮರೆತ್ತಿದ್ದ ರಾಯನನ್ನು ಕುರಿತು, ‘‘ನೋಡು ಕೃಷ್ಣ ನೋಡು, ಹರಿಹರ, ಬುಕ್ಕರಾಯರು ನೆಟ್ಟು, ನೀರೆರೆದು ಪೋಷಿಸಿದ ಈ ವಿಜಯನಗರ ಸಾಮ್ರಾಜ್ಯ ಇಂದು ಮಹಾನ್ ವೃಕ್ಷವಾಗಿ ಬೆಳೆದಿರುವುದನ್ನು. ಅನೇಕ ಕಂಟಕಗಳು, ಮುಸಲ್ಮಾನರ ಧಾಳಿಗಳು, ಮನೆತನದ, ದಾಯಾದಿಗಳ ಕಲಹಗಳು, ಪುಂಡು ಸಾಮಂತರ ಒಳಸಂಚು, ಪಿತೂರಿಗಳು, ಎಲ್ಲವನ್ನೂ ಎದುರಿಸಿ, ಎಷ್ಟೆತ್ತರಕ್ಕೆ ಬೆಳೆದಿದೆ. ನೀನು ಸಿಂಹಾಸನವನ್ನೇರಿದ ನಂತರವಂತೂ, ಕನ್ನಡನಾಡಿಗೇ ನ ಭೂತೋ ನ ಭವಿಷ್ಯತಿ ಎಂಬಂತ ಸುವರ್ಣಯುಗವನ್ನೇ ಸೃಷ್ಟಿಸಿದ್ದೀಯೆ...’

ಮುಂದಿನ ಪುಟ ನೋಡಿ ...

ತಿಮ್ಮರಸುವಿನ ಮಾತನ್ನು ತಡೆದು ರಾಯ ನುಡಿದ "ನೀವಿಲ್ಲದಿದ್ದರೆ ನಾನೆಲ್ಲಿರುತ್ತಿದ್ದೆ ಅಪ್ಪಾಜಿ, ನನ್ನ ಪ್ರತಿಯೊಂದು ಹೆಜ್ಜೆಗೂ ಮಾರ್ಗದರ್ಶಕರು ನೀವಲ್ಲವೆ, ಆರಂಭದಿಂದಲೂ ನಿಮ್ಮ ನೀತಿಗಳೇ ಅಲ್ಲವೆ ನಮ್ಮ ಶತ್ರುಗಳೂ ಮಿತ್ರರಾಗುವಂತೆ ಮಾಡಿದ್ದು, ನಿಮ್ಮ ತಂತ್ರಗಳೇ ಅಲ್ಲವೆ ನಮ್ಮನ್ನು ಕಷ್ಟಸಾಧ್ಯವಾದ ಯದ್ಧಗಳನ್ನು ಗೆಲ್ಲಲು ಸಾಧ್ಯವಾಗುವಂತೆ ಮಾಡಿದುದು. ಕಳಿಂಗ, ಕೊಂಡವೀಡು, ಅದಿಲ್ ಷಾಹಿ, ನಿಜಾಮರು, ತೆಲಂಗಾಣ, ರಾಯಚೂರು, ಎಲ್ಲೆಡೆಯ ವಿಜಯಗಳಲ್ಲೂ ನಿಮ್ಮ ಪೂರ್ವ ನಿಯೋಜಿತ ವಿಧಿ ವಿಧಾನಗಳು ಪ್ರಮುಖ ಪಾತ್ರವಹಿಸಿರುವುದು ಸುಳ್ಳೇನು? ಅದರೊಡನೆ ಸಮರ್ಥ ರಾಜ್ಯಭಾರ ನಿಗ್ರಹಕ್ಕೂ ನೀವೇ ಹಿನ್ನೆಲೆಯೆಂಬುದು ಅಲ್ಲಗಳೆಯ ಬೇಡಿ"

ತಿಮ್ಮರಸು ಮರುನುಡಿದರು, "ಕೃಷ್ಣ, ನಾನೇನಿದ್ದರೂ ನಿಮಿತ್ತ ಮಾತ್ರವಷ್ಟೇ, ನಿನ್ನ ಹೆಸರು ಆಚಂದ್ರಾರ್ಕವಾಗಿ ಉಳಿಯುವುದು ಖಂಡಿತ. ಇಲ್ಲಿಂದ ಕಾಣುತ್ತಲಿರುವ ನೂರಾರು ಗೋಪುರಗಳನ್ನು ನೋಡು, ಮುಗಿಲನ್ನು ಮುಟ್ಟುವ ಆ ಶಿಖರಗಳಂತೆಯೇ ನಿನ್ನ ಕೀರ್ತಿಯ ಶಿಖರವೂ ಬಹು ಎತ್ತರಕ್ಕೇರಿದೆ. ದಕ್ಷಿಣದಾದ್ಯಂತ 'ರಾಯ ಗೋಪುರಗಳು' ನಿನ್ನ ಹೆಸರನ್ನು ಚಿರಸ್ಥಾಯಿಯಾಗಿಸುತ್ತವೆ. ನೀನು ಹಿಂದೂಸಾಮ್ರಾಜ್ಯದ ಏಳಿಗೆಗಾಗಿ ಕಟ್ಟಿಸಿರುವ, ದೇಗುಲಗಳು, ಮಂಟಪಗಳು, ಕೆರೆಕಟ್ಟೆಗಳು, ಹೊಸ ನಗರಗಳು, ವೈಭವದಿಂದ ಮೆರೆಯುತ್ತಿವೆ. ಎಲ್ಲಕ್ಕಿಂತ ಹೆಚ್ಚಾಗಿ ಕನ್ನಡನಾಡಿನತ್ತ ತಿರುಗಿ ನೋಡಲೂ ಹೆದರುವಂತಹ ಪರಿಸ್ಥಿತಿಗೆ ಮುಸಲ್ಮಾನ ಆಕ್ರಮಣಕಾರರನ್ನು ತಂದಿರುವೆ. ಆದರೂ ಅಲ್ಲಿಯೂ ಹಿರಿತನ ಮೆರೆದು ಕ್ಷಮಾಗುಣ ತೋರಿರುವೆ, ಅಷ್ಟಲ್ಲದೆ ನಿನಗೆ 'ಯವನರಾಜ್ಯ ಪ್ರತಿಷ್ಠಾಪನಾಚಾರ್ಯ' ಎಂಬ ಬಿರುದೇ ಇಲ್ಲವೆ?"

"ಅಪ್ಪಾಜಿ, ಈ ಸಾಮ್ರಾಜ್ಯ ಸ್ಥಾಪನೆಯ ಮೂಲ ಉದ್ದೇಶವೇ ನಮ್ಮ ಧರ್ಮ, ಸಂಸ್ಕೃತಿಗಳನ್ನು ಕಾಪಾಡಿಕೊಳ್ಳಬೇಕೆಂಬುದು ಅಲ್ಲವೇ, ಅದಕ್ಕೆ ಭದ್ರತಳಹದಿಯನ್ನು ಹಾಕಿಕೊಟ್ಟರೆ, ಮುಂದಿನ ತಲೆಮಾರಿನವರು ನೆಮ್ಮದಿಯಿಂದ ತಮ್ಮ ಬದುಕನ್ನು ಸಾಗಿಸಬಹುದಲ್ಲವೇ".

ಆಗಸದಿ ದಟ್ಟೈಸಿದ ಕಾರ್ಮೋಡಗಳ ದಿಟ್ಟಿಸುತ್ತಾ "ಅಪ್ಪಾಜಿ, ಭಾದ್ರಪದ ಆರಂಭವಾಗಿ ಪಕ್ಷ ಕಳೆಯಿತು, ನವರಾತ್ರಿಯ ಸಿದ್ದತೆಗಳು ಸಾಗಿವೆ ತಾನೆ, ಬಂಧು ಬಾಂಧವರಿಗೆ, ಮಿತ್ರರಿಗೆ, ಹೊರದೇಶದ ಪ್ರವಾಸಿಗರಿಗೆ, ಪ್ರಜೆಗಳಿಗೆ ಆಹ್ವಾನ ಪತ್ರಿಕೆಗಳನ್ನು ಕಳುಹಿಸಿ ಆಯಿತು ತಾನೇ. ಸನ್ಮಾನಿತರ ಪಟ್ಟಿ, ಬಿರುದುಗಳು, ಶಾಸನಗಳು, ಹೊಸ ನಾಣ್ಯಗಳು, ದೇವಾಲಗಳಿಗೆ ದತ್ತಿಗಳು ಎಲ್ಲವೂ ಸಿದ್ಧವಾಗಬೇಕು. ರಾಜ್ಯದ ಮೂಲೆ ಮೂಲೆಗಳಲ್ಲಿರುವ ಪ್ರತಿಯೊಂದು ಗ್ರಾಮಗಳಲ್ಲೂ ಉತ್ಸವಗಳು ನಡೆಯಲಿ, ಸಂಗೀತ, ನೃತ್ಯ, ನಾಟಕ, ಮಲ್ಲಯುದ್ಧ, ನಂದಿಕೋಲು, ಆಟೋಟ ಸ್ಪರ್ಧೆಗಳು, ದೇವರ ರಥೋತ್ಸವಗಳು ಏರ್ಪಾಡಾಗಲಿ. ಇನ್ನು ಸೈನಿಕರಿಗೆ ವಿಶೇಷ ಭೋಜನಕೂಟ, ಅವರ ಕುಟುಂಬಗಳಿಗೆ ಉಡುಗೊರೆಗಳು, ವಸ್ತ್ರಾಭರಣಗಳು, ಹೆಚ್ಚಿನ ವರಾಹಗಳು ಎಲ್ಲವನ್ನೂ ನೀಡುವಂತೆ ಏರ್ಪಡಿಸಿ ಅಪ್ಪಾಜಿ".

"ಸೈನಿಕರೇ ನಮ್ಮ ದೇಶದ ಬೆನ್ನೆಲುಬು ಅಪ್ಪಾಜಿ, ಹಗಲಿರುಳು ಹೋರಾಡಿ, ಹಿಂದೂ ದೇಶ, ಹಿಂದೂ ಧರ್ಮವನ್ನು ಕಾಪಾಡಲು, ಪರಕೀಯರ ದುರಾಕ್ರಮಣದ ವಿರುದ್ಧ ಹೋರಾಡಿ ಪ್ರಾಣಕೊಡುವ ಅವರಿಗೆ ನಾವೆಷ್ಟು ಮಾಡಿದರೂ ಕಡಿಮೆಯೇ", ಕಳಕಳಿಯಿಂದ ರಾಯನು ನುಡಿದ. ಕೃಷ್ಣದೇವರಾಯನಿಗಿರುವ ಸೈನಿಕರ ಮೇಲಿನ ಅಭಿಮಾನ ಕಂಡು ಮೂಕನಾದ ತಿಮ್ಮರಸು, ಅಷ್ಟೇ ಅಲ್ಲ ಈ ರಾಯರರಾಯ ತಾನು ಬೆಳೆಸಿರುವ ಕೂಸೆಂಬ ಅಭಿಮಾನಮಿಶ್ರಿತ ಹೆಮ್ಮೆಯೂ ಮೂಡಿತು.

ತಿಮ್ಮರಸುವೆಂದರೆ ರಾಯನಿಗೆ ಎಷ್ಟೊಂದು ಅಭಿಮಾನ, ನಂಬುಗೆ, ಪ್ರೀತಿ ಎಂದರೆ, ತಿಮ್ಮರಸುವಿಗೆ ಕನಕಾಭಿಷೇಕವನ್ನು ಏರ್ಪಡಿಸಿ, ವಿಶೇಷ ನಾಣ್ಯವನ್ನು ಹೊರಡಿಸಿ, ಆ ನಾಣ್ಯದ ಒಂದು ಬದಿಗೆ ತನ್ನ ಹೆಸರು ಮತ್ತು ಮತ್ತೊಂದು ಬದಿಗೆ ತಿಮ್ಮರಸುವಿನ ಹೆಸರನ್ನೂ ಹಾಕಿಸಿದ್ದನು. ಕೃಷ್ಣದೇವರಾಯ ಮತ್ತು ತಿಮ್ಮರಸು ಎಂದರೆ ಒಂದೇ ಶರೀರದಂತೆ ಎಂಬ ಮಾತು ಎಲ್ಲರ ಬಾಯಲ್ಲಿತ್ತು. ಅದೇರೀತಿ ಕೃಷ್ಣದೇವರಾಯನ ಮನದಾಳದ ಬಯಕೆಯೊಂದನ್ನು ಮಹಾಮಂತ್ರಿಯು ಈಡೇರಿಸಿದ್ದನು. ಅದೇನೆಂದರೆ, ಕೃಷ್ಣದೇವರಾಯನ ಆರಾಧ್ಯ ದೈವ ತಿರುಮಲೆಯ ವೆಂಕಟರಮಣ. ತಾನೂ ತನ್ನ ಪತ್ನಿಯರು, ಚಿರವಾಗಿ ಆ ವೆಂಕಟೇಶ್ವರನ ಸನ್ನಿಧಿಯಲ್ಲಿ ಇದ್ದುಬಿಡಬೇಕು ಎಂದು ಸದಾಕಾಲ ನುಡಿಯುತ್ತಿದ್ದ. ಅವನಿಚ್ಛೆಯಂತೆ ರಾಯನು ತನ್ನ ಪತ್ನಿಯರೊಡನೆ ಕೈಮುಗಿದು ನಿಂತಿರುವಂತೆ ವಿಗ್ರಹಗಳನ್ನು ಮಾಡಿಸಿದ. ಆ ವಿಗ್ರಹಗಳನ್ನು ಸ್ವತಃ ಕೃಷ್ಣದೇವರಾಯನೇ ತಿರುಮಲೆಯ ದೇಗುಲದಲ್ಲಿ ಸ್ಥಾಪಿಸಿದ. ಹೀಗಿತ್ತು ಕೃಷ್ಣದೇವರಾಯ, ತಿಮ್ಮರಸುವಿನ ಜೋಡಿ.

****

ಮರೆಯಾದ ಮಹಾನ್ ತಾರೆ

ಒಳ್ಳೆಯದು ಹೆಚ್ಚುಕಾಲ ನಿಲ್ಲದೆಂಬುದು ಕೃಷ್ಣದೇವರಾಯ ಅಪ್ಪಾಜಿಯ ವಿಷಯದಲ್ಲಿ ಸತ್ಯವಾಯಿತು.
ಕೃಷ್ಣದೇವರಾಯನಿಗೆ ಇಬ್ಬರು ಪುತ್ರಿಯರು ಮತ್ತು ಏಕೈಕ ಪುತ್ರ ತಿರುಮಲರಾಯ. ಕೃಷ್ಣದೇವರಾಯ ಯುದ್ಧನಿರತನಾಗಿರುವ ಸಮಯದಲ್ಲಿ, ರಾಜಧಾನಿಯಲ್ಲಿ ಆರು ವರ್ಷದ ಬಾಲಕ ತಿರುಮಲರಾಯ ವಿವಾದಾತ್ಮಕವಾಗಿ ವಿಷಪ್ರಾಷನದಿಂದ ಮರಣಹೊಂದಿದ. ಮಹಾಮಂತ್ರಿ ತಿಮ್ಮರಸು ಹೊಟ್ಟೆಕಿಚ್ಚಿನಿಂದ ತಿರುಮಲರಾಯನನ್ನು ಕೊಲ್ಲಿಸಿದ ಎಂಬ ಅಪಪ್ರಚಾರವನ್ನು ರಾಯ ಬಲವಾಗಿ ನಂಬಿದ, ಮೊದಲೇ ಮುಂಗೋಪಿಯಾದ ರಾಯ, ಪುತ್ರಶೋಕದಿಂದ ವಿವೇಕ ಶೂನ್ಯನೂ ಆಗಿ, ತಿಮ್ಮರಸುವಿನ ಕುಟುಂಬವನ್ನು ಕಾರಾಗೃಹದಲ್ಲಿರಿಸಿ, ತಿಮ್ಮರಸುವಿಗೆ ಕ್ರೂರ ಶಿಕ್ಷೆ ವಿಧಿಸಿದ.

ನಂತರದ ದಿನಗಳಲ್ಲಿ ಕೃಷ್ಣದೇವರಾಯನಿಗೆ ತನ್ನ ತಪ್ಪಿನ ಅರಿವಾಗಿ, ತಿಮ್ಮರಸುವಿನ ಕ್ಷಮೆ ಕೋರಿ, ಅವನಿಗೆ ಮತ್ತೆ ಹಿಂದಿನ ಸ್ಥಾನಮಾನಗಳನ್ನು ನೀಡಿದ.

ಮುಂದಿನ ಪುಟ ನೋಡಿ ...

ಆದರೆ ಪುತ್ರಶೋಕ, ಅಪ್ಪಾಜಿಯ ವಿಷಯದಲ್ಲಿ ತೋರಿದ ಅನ್ಯಾಯ, ಇವುಗಳಿಂದ ಅಪಾರವಾಗಿ ನೊಂದಿದ್ದ ಕೃಷ್ಣದೇವರಾಯ, ಅನಾರೋಗ್ಯಕ್ಕೆ ತುತ್ತಾಗಿ, ೪೨ ವರ್ಷಗಳ ಚಿಕ್ಕವಯಸ್ಸಿನಲ್ಲೇ ಮೃತನಾದ.

ದಕ್ಷಿಣಭಾರತದ, ಹಿಂದೂ ಸಾಮ್ರಾಜ್ಯದ ಆಶಾಕಿರಣವಾಗಿದ್ದ ಮಹಾನ್ ತಾರೆಯೊಂದು ಮಿನುಗಿ ಮರೆಯಾಗಿತ್ತು. ಮುಂದೆ ನೂರಾರು ವರ್ಷಗಳು ಬೆಳಗುವಷ್ಟು ಬೆಳಕನ್ನು ಬೀರಿ ಹೋಗಿತ್ತು. ▪

ಕನ್ನಡದ ಒಂದು ಕಾಯಕಕ್ಕೆ ಕೈ ಜೋಡಿಸಿ

ನೊಂದಾಯಿಸಲು ಮಿಂಚಂಚೆ ವಿಳಾಸ -sugamakannada@gmail.com

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ವಚನ, ಕಗ್ಗ, ಗಮಕ, ಹರಿದಾಸ ಸಾಹಿತ್ಯಗಳು ಕೆಲವು ಪ್ರಮುಖ ಪ್ರಾಕಾರಗಳು. ಇವುಗಳಲ್ಲಿ ಭಗವಂತನ ನಾಮಸ್ಮರಣೆಯಷ್ಟೇ ಅಲ್ಲದೆ, ವಚನಗಳು ತಮ್ಮ ಸರಳ ನುಡಿಯಲ್ಲಿ ಅನುಭವದ ಅರಿವು ನೀಡುವಲ್ಲಿ ನೆರವಾದರೆ, ಹರಿದಾಸ ಸಾಹಿತ್ಯವು ಸಂಗೀತ ಮತ್ತು ಸೊಬಗಿನ ಸಾಹಿತ್ಯದ ಮಿಲನವಾಗಿದೆ. ಕಗ್ಗ, ತ್ರಿಪದಿ,ಷಟ್ಪದಿಗಳು ಅರ್ಥಪೂರ್ಣ ವಿಚಾರಗಳಿಂದ ಕೂಡಿ ಜೀವನದರ್ಶನ ಹಾಗೂ ವಿಚಾರಪೂರ್ಣ ವಿಷಯಗಳಾಗಿ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಜಗತ್ತಿನ ಎಂದಿಗೂ ಝಗಝಗಿಸುವ ಕೊಡುಗೆಗಳಾಗಿವೆ.

ಅಂತರ್ಜಾಲದ ಈ ಮಹಾ ಜಗತ್ತಿನಲ್ಲಿ ಈಗ ಸಾಕಷ್ಟು ಕನ್ನಡಿಗರು ಕರ್ನಾಟಕದಿಂದ ಹೊರಗಿರುವುದು ಎಲ್ಲರಿಗೂ ತಿಳಿದ ವಿಚಾರ. ಅವರೆಲ್ಲರಿಗೂ ಅಲ್ಲದಿದ್ದರೂ ಆಸಕ್ತರಿಗೆ ನೆನೆದಾಗ ಬೆರಳಂಚಿನಲ್ಲೇ ಒಂದೇ ಕಡೆ ಕೈಗೆಟಕುವ ಹಾಗೆ ಮಾಡುವ ನಿಟ್ಟಿನಲ್ಲಿ ನಮ್ಮ ಸುಗಮ ಕನ್ನಡ.ಕಾಂ ಅಂತರ್ಜಾಲ ಕ್ಷೇತ್ರದಲ್ಲಿ ಸುಪ್ರಸಿದ್ಧ ಶರಣರ ವಚನಗಳು, ದಾಸರ ಪದಗಳು, ಕಗ್ಗ, ತ್ರಿಪದಿಗಳು ಹೀಗೆ ಇನ್ನೂ ಅನೇಕ ರಚನೆಗಳನ್ನು ಸಂಗ್ರಹ ಮಾಡುವ ಯೋಜನೆಯನ್ನು ಹಮ್ಮಿಕೊಂಡಿದೆ. ಇದಕ್ಕೆ ತಮ್ಮಗಳ ಸಹಾಯ ಬೇಕಾಗಿದೆ. ತಮಗೆ ಕನ್ನಡ ಬೆರಳಚ್ಚು ಮಾಡಲು ಸಾಧ್ಯವಿದ್ದಲ್ಲಿ, ಈ ಕಲಸ ಆದಂತೇ ಎಂದುಕೊಳ್ಳಿ. ಪ್ರತಿ ವಿಭಾಗದಲ್ಲೂ ಸಾವಿರಕ್ಕೂ ಮೀರುವಂತೆ ಕೃತಿಗಳ ಕಲೆ ಹಾಕುವ ಯೋಚನೆ ಇದೆ. ಈ ಕೆಲಸಕ್ಕೆ ಗರಿಷ್ಟ ಮಿತಿಯಿಲ್ಲದಂತೆ ಹೆಗಲುಕೊಟ್ಟು ನೀವು ಸಹಾಯ ನೀಡಬಹುದು.ನಿಮ್ಮಲ್ಲಿ ಹೆಚ್ಚಿನ ಕನ್ನಡ ಅಭಿಮಾನವಿದ್ದಷ್ಟೂ ಹೆಚ್ಚಿನ ಸಹಾಯ ಸಾಧ್ಯವೆಂಬ ನಂಬಿಕೆ ನಮ್ಮದು. ೩೧ ಆಗಸ್ಟ್ ೨೦೧೫ ರೊಳಗೆ ಈ ಕಾಯಕ ಮುಗಿಸಿ, ಆಸಕ್ತರಿಗೆ ಲಭ್ಯವಾಗಿಸುವ ಆಸೆ ನಮ್ಮದು.

ಸಿಡ್ನಿ ಕನ್ನಡ ಶಾಲೆಯಿಂದ ಈಗಾಗಲೇ ಉತ್ತೀರ್ಣರಾದ ಮಕ್ಕಳೂ, ಸಿಡ್ನಿ ಕನ್ನಡ ಶಾಲೆಯ ಶಿಕ್ಷಕರೂ, ಆಸ್ಟ್ರೇಲಿಯಾದಲ್ಲಿ ಈಗಾಗಲೇ ಕನ್ನಡ ಟೈಪಿಂಗ್ ಮಾಡಲು ಕಲಿತವರೂ,ಪ್ರಪಂಚದ ನಾನಾ ಕಡೆಯಿಂದ ಹೊರನಾಡ ಚಿಲುಮೆಯ ಓದುಗರೂ, ಬರಹಗಾರರೂ ಸಹ ತಮ್ಮ ಕೈ ಜೋಡಿಸಿದ್ದಾರೆ.

ಸಹಾಯ ಹೇಗೆ?

೧.ಮೊದಲು ಆಸಕ್ತರು ಈ-ಮೈಲ್ ಮೂಲಕ ತಮ್ಮ ಹೆಸರು ನೊಂದಾಯಿಸಿಕೊಳ್ಳುವುದು.

೨.ಸುಪ್ರಸಿದ್ಧ ರಚನಕಾರರ ವಚನ, ದಾಸರ ಪದಗಳು, ಕಗ್ಗ, ತ್ರಿಪದಿಗಳು ಇವುಗಳಲ್ಲಿ ಸುಮಾರು ನಾಲ್ಕೈದು ಪುಟಗಳಷ್ಟು ತಮಗೆ ಈ-ಮೈಲ್ ಮೂಲಕ ಕಳುಹಿಸಿಕೊದಲಾಗುವುದು.

೩.ಅದನ್ನು ತಾವು ಬರಹ-ಯೂನಿಕೋಡ್ ಅಥವಾ ಗೂಗಲ್ ಸಹಾಯದಿಂದ ಟೈಪ್ ಮಾಡಿ ನಮಗೆ ಕಳುಹಿಸುವುದು.

೪.ಅವುಗಳನ್ನು ವೆಬ್ ಸೈಟ್ ನಲ್ಲಿ ಪ್ರಕಟಿಸಿದ ನಂತರ ಸಹಾಯ ಮಾಡಿದ ಎಲ್ಲರ ಹೆಸರುನ್ನೂ ಶಾಶ್ವತವಾಗಿ ಮುದ್ರಿಸಲಾಗುವುದು. ಅತಿ ಹೆಚ್ಚು ನೆರವು ನೀಡಿದವರಿಗೆ ಕನ್ನಡ ಶಾಲೆಯ ಕಡೆಯಿಂದ ಉಡುಗೊರೆ ಖಚಿತ.

ನೊಂದಾಯಿಸಲು ಮಿಂಚಂಚೆ ವಿಳಾಸ - sugamakannada@gmail.com

ತಾಯಿ ಶಾಪ !!!

ಸ್ಮಿತಾ ಮೇಲ್ಕೋಟೆ

ಮದರ್ಸ್ ಡೇ ಆಚರಣೆ ಸ್ವಲ್ಪ ಜೋರಾಗಿ ಮಾಡಿ ಸುಸ್ತಾಗಿ, ಆಫೀಸ್ ಒಂದಿನ ರಜೆ ಹಾಕಿ, ಮನೆಯವರನ್ನು ಮತ್ತು ಮಕ್ಕಳನ್ನು ಆಫೀಸ್ ಶಾಲೆಗಳಿಗೆ ಕಳಿಸಿ, ನಿಜವಾದ ಮದರ್ಸ್ ಡೇ ಮಾಡಿಕೊಳ್ಳೋಣ ಅಂತ ನೆಮ್ಮದಿಯಾಗಿ ಊಟ ಮಾಡಿ ಸವಿನಿದ್ದೆ ತೆಗೆಯುತಿದ್ದೆ. ಕನಸಲ್ಲಿ ಎಲ್ಲೋ ಬಾಗಿಲು ಬಡಿದ ಹಾಗಾಯಿತು. ಹೊರ ದೇಶಕ್ಕೆ ಬಂದ ಮೇಲೆ ಭಾರತದ ತರ ಸೇಲ್ಸ್ ಮ್ಯಾನ್ ಗಳನ್ನೂ ಜಾಸ್ತಿ ನೋಡಲಿಲ್ಲ. ಈ ಹೊತ್ತಿನಲ್ಲಿ ನಮ್ಮನೆಗೆ ಯಾರಪ್ಪಾ ಬರ್ತಾರೆ, ಎಲ್ಲೋ ನನ್ನ ಭ್ರಮೆ ಅಂತ ಮುಸುಕೆಳೆದು ಮಗ್ಗುಲು ಬದಲಿಸಿ, ಕಾಣುತ್ತಿದ್ದ ಕನಸನ್ನು ಬ್ರೇಕ್ ಗೆ ಬಾದ್ ಅಂತ ಮುಂದುವರಿಸಿದೆ. ಟಿ ವಿ ಕಮರ್ಷಿಯಲ್ ಗಳ ತರ ಮತ್ತೊಮ್ಮೆ ಮಗದೊಮ್ಮೆ ಬಾಗಿಲು ಬಡಿಯುವುದು ಜೋರಾಯಿತು. ನನ್ನ ಕನಸನ್ನು ಸಣ್ಣ ಕತ್ತರಿ ತಗೊಂಡು ತುಂಡರಿಸಿ, ವಿಧಿ ಇಲ್ಲದೆ ಎದ್ದು ಹೋಗಿ ನಿದ್ದೆ ಕಣ್ಣಲ್ಲಿ ಬಾಗಿಲಿನ ಬಳಿ ಹೋಗಿ ' ಯಾರು, ಯಾರದು ' ಅಂತ ಕಸ್ತೂರಿ ಕನ್ನಡದಲ್ಲಿ ಉಲಿದೆ. ಹೊರಗಡೆಯಿಂದ ಇಂಗ್ಲಿಷ್ ದನಿ ' ಹಲೋ ಮೇಡಂ ' ಅಂದಿತು. ಒಹೋ ಪೋಸ್ಟ್ ಮ್ಯಾನ್ ಇರಬೇಕು, ಸೈನ್ ಗೀನ್ ಮಾಡ್ಬೇಕೇನೋ ಅಂತ ಪೂರಾ ಡೋರ್ ತೆರೆದು, ಏನಪ್ಪಾ ಸಮಾಚಾರ ಎಂದೆ ನನಗೆ ಬರುತ್ತಿದ್ದ ಚೂರು ಪಾರು ಆಸ್ಟ್ರೇಲಿಯನ್ accent ನಲ್ಲಿ.

ಸೂಟು ಬೂಟು ಹಾಕಿದ್ದ ೨೦-೨೫ ರ ಯುವಕ ನಗುಮುಖದಿಂದ ನಕ್ಕನು. ತಕ್ಷಣ ನನ್ನ ಮನಸ್ಸು ಸಾವಿರಾರು ಮೈಲು ದೂರದ ಇಂಡಿಯಾಗೆ ಟಿಕೆಟ್ ರಹಿತ ಪ್ರಯಾಣ ಮಾಡಿತ್ತು, ಇದೇ ರೀತಿ ಬಿಸಿಲಿನ ಬೇಗೆಯಲ್ಲೂ ನಗು ಮುಖ ಹೊತ್ತು, ತಾವು ಮಾರಬೇಕಿದ್ದ ಸಾಮಾನನ್ನು ಬಾಗಿಲು ತೆಗೆದ ತಕ್ಷಣ ನಮ್ಮ ಮುಖದ ಮುಂದೆ ಹಿಡಿದು, ಮೇಡಂ ಹೊಸ ಪ್ರಾಡಕ್ಟ್, ಅಂಗಡಿಯಲ್ಲಿ ಇನ್ನೂ ಮಾರಟಕ್ಕಿಟ್ಟಿಲ್ಲ, ನಿಮಗೇ ಅಂತ ಕಡಿಮೆ ರೇಟ್, ನಿಮ್ಮ ಪಕ್ಕದ ಮನೆಯವರು, ಎದುರು ಮನೆಯವರು ಎಲ್ಲಾ ಕೊಂಡಾಯಿತು ಅಂತ ಏನೇನೋ ಕಥೆ ಹೆಣೆಯುವುದು ನೆನಪಿಗೆ ಬಂದು ಬಿಡ್ತು. ಹಂಗೇ ಹಗಲುಗನಸಿನ ಕುದುರೆ ಏರಿ ಹೋದ ಹಾಗೆ ಗರಬಡಿದು ನಿಂತಿದ್ದ ನನ್ನ ಮತ್ತೆ ಇಂಗ್ಲಿಷ್ ದನಿ ಎಚ್ಚರಿಸಿತು.

ನವ ಯುವಕ ಮತ್ತೆ ಮೇಡಂ we have opened Thai place ಅಂದ. ತಕ್ಷಣ ಮದರ್ಸ್ ಡೇ ಗೆ ಸೇರಿದ್ದ ಮಾತೆಯರೆಲ್ಲ, ಅದೇನೋ ಥಾಯ್ ಊಟದ ಬಗ್ಗೆ ಬಹಳಷ್ಟು ಕೊರೆದಿದ್ದರು. ನಮ್ಮ Thaiನಾಡಿನ ಅಡಿಗೆ ಮಾತ್ರ ಇಷ್ಟ ಪಡುತಿದ್ದ ನನಗೇನೆ ಅಂಥದ್ದು ಏನಿದೆಯೋ ಒಂದು ಬಾರಿ ತಿಂದು ನೋಡಬೇಕು ಅನ್ನೋ ಕುತೂಹಲ ಮೂಡಿಸಿದ್ದರು. ಅದೇನೋ ರೆಡ್ ಕರ್ರಿ, ಗ್ರೀನ್ ಕರ್ರಿ ಅಂತೆ, ತರಕಾರಿಗಳೆಲ್ಲ ಸಕ್ಕತ್ ಕರಂ ಕುರಂ ಅಂತೆ, ಅದೇನೋ ಜಾಸ್ಮಿನ್ ರೈಸ್ ಅಂತೆ. ಹೀಗೆ ಬಹಳಷ್ಟು ಅಂತೆ ಕಂತೆ ಗಳ ಬೊಂತೆ ನನ್ನ ತಲೆಯಲ್ಲಿ ಕುಂತಾಗಿತ್ತು.

ನಾನು ಸ್ವಲ್ಪ ಉತ್ಸಾಹ ತೋರಿಸುತ್ತಾ ಎಲ್ಲಿ ಓಪನ್ ಮಾಡಿದ್ದೀರಾ? ಅಂತ ಮರುಪ್ರಶ್ನೆ ಹಾಕಿದೆ ನವಯುವಕನಿಗೆ. ಅವನು ನನ್ನ ಉತ್ಸಾಹ ನೋಡಿ, ಬಿತ್ತು ಬಲೆಗೆ ಕಸ್ಟಮರ್ ಅಂದುಕೊಂಡು, ಮೇಡಂ ಹತ್ತು ಮನೆಗೆ ಹೋಗಿದ್ದೆ ನಿಮ್ಮ ಬೀದಿಯಲ್ಲಿ, ಎಲ್ಲರೂ ಇಷ್ಟ ಪಟ್ಟು ತಗೊಂಡರು ಅಂದ. ಹಾ ಏನು, Thai ಅಡಿಗೆ ಮಾಡಿ ಬಾಕ್ಸ್ ಹಾಕೊಂಡು ಮಾರಾಟ ಮಾಡ್ತಾ ಇದ್ದಾನಾ ? ನನ್ನ ಪೊಗದಸ್ತಾದ ತುಂಬಿದ ಹೊಟ್ಟೆ ನೋಡಿಕೊಂಡು, ಅಪ್ಪ ಮಾರಾಯ ನನ್ನ ಊಟ ಆಗಿದೆ, ಈಗ ಏನೂ ಬೇಡ. ಅಡ್ರೆಸ್ ಬೇಕಾದರೆ ಕೊಟ್ಟು ಹೋಗು ಮುಂದೊಂದು ದಿನ ಸಮಯ ಆದಾಗ ನಮ್ಮ ಫ್ಯಾಮಿಲಿ ಜೊತೆ ಬಂದು ನಿಮ್ಮ ಹೋಟೆಲ್ನಲ್ಲಿಯೇ ಊಟ ಮಾಡಿಕೊಂಡು ಹೋಗ್ತೀವಿ ಅಂತಂದೆ. ಅವನು ಮೇಡಂ ನೋ ನೋ!!! ನೋ ಫುಡ್ !! ಸ್ವಲ್ಪ ಜೋರಾಗಿಯೇ ಹೇಳಿದ.

ಹಾಗಾದ್ರೆ ಏನು, ಥೈಲ್ಯಾಂಡ ಆಹಾರ ಮಾಡೋದು ಹೇಗೆ ಅಂತ ಅಡಿಗೆ ಕ್ಲಾಸ್ ಮಾಡ್ತಾ ಇರಬೇಕು ಅಂದುಕೊಂಡು, ನೋಡಪ್ಪ ನನಗೆ ಅಷ್ಟು ಟೈಮ್ ಇಲ್ಲ, ನಾನು ನಾಳೆಯಿಂದ ಕೆಲಸಕ್ಕೆ ಹೋಗಬೇಕು. ನಿನ್ನ ಕುಕಿಂಗ್ ಕ್ಲಾಸ್ಗೆಲ್ಲಾ ಬರಕ್ಕಾಗಲ್ಲ. ನೀನೇನಾದರು ಹೋಟೆಲ್ ಓಪನ್ ಮಾಡಿದ್ರೆ ಹೇಳು ಬೇಕಾದರೆ ಬರ್ತೀವಿ ಅಂತ ಅವನನ್ನ ಸಾಗ ಹಾಕುವ ಟೋನ್ ನಲ್ಲಿ ಹೇಳಿದೆ.

ಸ್ವಲ್ಪ ಬೇಜಾರುಗೊಂಡ ಅವನು ಒನ್ ಮಿನಿಟ್ ಪ್ಲೀಸ್ ಅಂತ ತನ್ನ ಬ್ಯಾಗ್ ಒಳಗೆ ಕೈ ಹಾಕಿದ. ಅದನ್ನು ನೋಡಿ ಅಯ್ಯೋ ದೇವ್ರೇ ನಾನು ಬೇಡ ಅಂದ ಸಿಟ್ಟಿಗೆ, ಗನ್ ಏನಾದರು ತೆಗೆದು ನನ್ನ ಶೂಟ್ ಮಾಡಿ ಬಿಡ್ತಾನೋ ಹೇಗೆ ಅಂತ ಒಳಗೆ ನಡುಕ ಹುಟ್ಟಿತು. ನಾನು ಬೆಂಗಳೂರಿನಲ್ಲಿದ್ದಾಗ ಯಾವ ಸೇಲ್ಸ್ ಮ್ಯಾನ್ಗಳನ್ನೂ ಬಾಗಿಲ ಒಳಗೆಕೂಡ ಸೇರಿಸುತ್ತಿರಲಿಲ್ಲ, ಕರ್ಟನ್ ಸರಿಸಿ ಮೆತ್ತಗೆ ನೋಡಿ, ಮನೆಯಲ್ಲಿ ಯಾರು ಇಲ್ಲ ಅನ್ನುವ ಹಾಗೆ ಆಕ್ಟ್ ಮಾಡಿಕೊಂಡು, ಎಷ್ಟು ಸಾರಿ ಕೂಗಿದರೂ ಓಗೊಡದೆ, ಸೇಲ್ಸ್ ಮ್ಯಾನ್ಗಳ ಮುಖ ಚರ್ಯೆ ಬದಲಾಗುವುದು ಗಮನಿಸ್ಕೊಂಡು ಚಿಕ್ಕ ಟಿವಿ ಶೋ ನೋಡುವ ಹಾಗೆ ಒಳಗಿನಿಂದಲೇ ನಿಂತು, ನಂತರ ಅವನು ಹೋಗುವುದನ್ನು ಕಣ್ಣಾರೆ ನೋಡಿ ಅಬ್ಬ ಅಂತ ನಿಟ್ಟುಸಿರು ಬಿಡುತಿದ್ದ ನಾನು ಇಂದು ಎಲ್ಲೋ ಸಾವಿರಾರು ಮೈಲು ಆಚೆ ಬಂದು ಒಂದು ಚಿಕ್ಕ ಸೇಲ್ಸ್ ಮ್ಯಾನ್ ಎದುರು ನಿಂತು ಗಡ ಗಡ ನಡುಗುವುದು ದೊಡ್ಡ ವಿಪರ್ಯಾಸವಾಗಿ ಹೋಯಿತು.

ನನ್ನ ಮುಂದೆ ನಿಂತಿದ್ದ ಯುವಕನ ಕೈ ಬ್ಯಾಗಿನಿಂದ ಆಚೆ ಬರುವಷ್ಟರಲ್ಲಿ ನನ್ನ ಗಂಟಲು ಒಣಗತೊಡಗಿತ್ತು ಭಯಕ್ಕೆ. ಅಂತು ಇಂತೂ ಗನ್ ಅಂತ ಹೆದರಿದ್ದ ನನಗೆ, ಏನೋ pamplet ಕಾಣಿಸಿ ಸ್ವಲ್ಪ ಸಮಾಧಾನವಾಯಿತು. ಸೇಲ್ಸ್ ಮನ್ನು ಪಾಪ ಇನ್ನಷ್ಟು ವಿನಯ ತಂದುಕೊಂಡು " ಮೇಡಂ please have a look ಅಂತ pamplet ನನ್ನ ಕೈಗಿಟ್ಟ. ನೋಡ್ತೀನಿ NEW TYRE PLACE!! All Serivices free first month ಅಂತ ದೊಡ್ಡಕ್ಷರದಲ್ಲಿ ಬರೆದಿದ್ದನ್ನ ಓದಿ, ನಾನು ಅರ್ಥ ಮಾಡಿಕೊಂಡಿದ್ದ ಥಾಯ್ ಪ್ಲೇಸ್ ಇದೇನಾ ಅಂತ ನನ್ನ ಮುಖದಲ್ಲಿ ದೊಡ್ಡ ನಗು ಮೂಡಿತು!!! ▪

ವಿಜ್ಞಾನ

ಕ್ರೆಡಿಟ್ ಕಾರ್ಡ್

ಸಂಕಲನ: ಬದರಿ ತ್ಯಾಮಗೊಂಡ್ಲು



ಕ್ರೆಡಿಟ್ ಕಾರ್ಡನ್ನು ಶಾಪಿಂಗ್ ಮಾಡಿ ಉಜ್ಜಿದಾಗ ಏನಾಗುತ್ತದೆ ಎನ್ನುವುದರ ಒಂದು ಪುಟ್ಟ ಪರಿಚಯ ಈ ಪ್ರಯೋಗದ ಉದ್ದೇಶ. ಇದನ್ನು ಸುಲಭವಾಗಿ ಮನೆಯಲ್ಲಿ ಮಾಡಬಹುದು.

ಬೇಕಾಗುವ ಸಾಮಗ್ರಿ:

- ಒಂದು ಹಳೆಯ ಉಪಯೋಗಿಸದ ಕ್ರೆಡಿಟ್ ಕಾರ್ಡ್ (ಅಥವಾ ಮ್ಯಾಗ್ನೆಟಿಕ್ ಸ್ಟ್ರಿಪ್ ಇರುವ ಕಾರ್ಡ್)
- ತುಕ್ಕು ಹಿಡಿದಂತಹ ಯಾವುದೇ ಒಂದು ವಸ್ತು (ತುಕ್ಕು ಹಿಡಿದ ಬೋಲ್ಟ್ ನಟ್ ಇತ್ಯಾದಿ)
- ಉಪ್ಪು ಕಾಗದ (ಸ್ಯಾಂಡ್ ಪೇಪರ್)

ವಿಧಾನ:

- ಕಾಲು ಚಮಚ ಆಗುವಷ್ಟು ತುಕ್ಕಿನ ಪುಡಿಯನ್ನು ತುಕ್ಕು ಹಿಡಿದ ವಸ್ತುವಿನಿಂದ ಸ್ಯಾಂಡ್ ಪೇಪರ್ ಉಪಯೋಗಿಸಿ ಇಟ್ಟುಕೊಳ್ಳಿ
- ಆ ಪುಡಿಯನ್ನು ಕಾರ್ಡಿನ ಮ್ಯಾಗ್ನೆಟಿಕ್ ಪಟ್ಟಿಯ ಮೇಲೆ ಉದುರಿಸಿ.
- ನಿಧಾನವಾಗಿ ಕಾರ್ಡ್ ಬಗ್ಗಿಸಿ ಪುಡಿ ಉದುರುವಂತೆ ಮಾಡಿ
- ಹೀಗೆ ಮಾಡಿದಾಗ ಉದ್ದುದ್ದದ ಗೆರೆಗಳು ಕಾಣುತ್ತವೆ. ಈ ಗೆರೆಗಳೇ ನಮ್ಮ ವಯ್ಯಕ್ತಿಕ ಮಾಹಿತಿಯನ್ನು ಸಂಕೇತ ರೂಪದಲ್ಲಿ ಹಿಡಿದಿಟ್ಟುಕೊಳ್ಳುವುದು

ಏನಾಗುತ್ತಿದೆ:

ಕ್ರೆಡಿಟ್ ಕಾರ್ಡಿನ ಆ ಪಟ್ಟಿಯಲ್ಲಿ ಆಯಸ್ಕಾಂತೀಯ ಗೆರೆಗಳಾಗಿ ನಿಮ್ಮ ವಯ್ಯಕ್ತಿಕ ಮಾಹಿತಿಯನ್ನು ಸಂಗ್ರಹಿಸಿರುತ್ತಾರೆ. ನೀವು ತುಕ್ಕು ಹಿಡಿದ ಪುಡಿಯನ್ನು ಉದುರಿಸಿದಾಗ ಕಬ್ಬಿಣದ ಆ ಪುಡಿಯು ಆಯಸ್ಕಾಂತದಿಂದ ಆಕರ್ಷಿತವಾಗಿ ಅಂಟುಕೊಳ್ಳುತ್ತದೆ. ಹೀಗಾಗಿ ಆ ತರಹದ ಗೆರೆಗಳನ್ನು ನೋಡುತ್ತೀರಿ. ನೀವು ಕ್ರೆಡಿಟ್ ಕಾರ್ಡ್ ಅನ್ನು ಮಷೀನ್ ಮೂಲಕ ಉಜ್ಜಿದಾಗ, ಅದರಲ್ಲಿ ಉಂಟಾಗುವ ವಿದ್ಯುಚ್ಛಕ್ತಿ ಪ್ರವಾಹದ ಏರಿಳಿತದ ಮಾಹಿತಿಯನ್ನು ರೀಡರ್ ಗೆ ರವಾನಿಸಲ್ಪಡುತ್ತದೆ. ರೀಡರ್ ನಲ್ಲಿರುವ ತಂತ್ರಾಂಶದ ಸಹಾಯದಿಂದ ಕಾರ್ಡ್ ನಂಬರ್ ಇತ್ಯಾದಿ ಮಾಹಿತಿ ಓದಲಾಗುತ್ತದೆ ▪

ಜಾಣ ಕರ್ನಾಟಕ – ಉತ್ತರ

೧. ಮೆಜೆಸ್ಟಿಕ್ ಬಸ್ ನಿಲ್ದಾಣ. ಕೆಂಪೇಗೌಡ.

೨. ಮಲ್ಲೇಶ್ವರ ಮತ್ತು ಬಸವನಗುಡಿ. (MAL-GUDI)

ಅಲ್ಲಲ್ಲಿ ಏನೇನು

ನಿಮ್ಮ ಕಾರ್ಯಕ್ರಮವಿದ್ದರೆ ತಿಳಿಸಿ - horanadachilume@gmail.com

ಸುಗಮ ಕನ್ನಡ ಕೂಟದ

ವೈಭವದ ದಶಮಾನೋತ್ಸವ

ಅಕ್ಟೋಬರ್ ೨೦೧೫ ರಲ್ಲಿ

ವಿವರಗಳನ್ನು ನಿರೀಕ್ಷಿಸಿ

ಗಾನ ಸಂಜೆ - Anuradha Bhat

5th July @ 4pm till 7pm
Clovelly park community centre,
16 York avenue Clovelly Park.

Organised by Adelaide Kannada sangha
For Details email - adelaidekannadasangha@gmail.com

ಈ ಸಂಚಿಕೆಯನ್ನು ನಿಮಗಾಗಿ ತಂದವರು – ಸುಗಮ ಕನ್ನಡ ಕೂಟ – ಸಿಡ್ನಿ, ಆಸ್ಟ್ರೇಲಿಯಾ

ವಿನ್ಯಾಸ ಮತ್ತು ಮುಖ್ಯ ಸಂಪಾದಕರು – ಬದರಿ ತ್ಯಾಮಗೊಂಡ್ಲು ~ ಸಂಕಲನ – ವೀಣಾ ಸುದರ್ಶನ್, ರಾಜಲಕ್ಷ್ಮಿ ನಾರಾಯಣ

ಸಲಹಾ ಸಮಿತಿ –ಕನಕಾಪುರ ನಾರಾಯಣ, ನಾಗೇಂದ್ರ ಅನಂತಮೂರ್ತಿ

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲ ವಿಷಯಗಳು ವಿವಿಧ ಲೇಖಕರ ಅನಿಸಿಕೆಗಳು. ಯಾವುದೇ ಅನಾನುಕೂಲವಾದಲ್ಲಿ "ಸುಗಮ ಕನ್ನಡ ಕೂಟ" ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಜವಾಬ್ದಾರರಲ್ಲ. ಈ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಸುದ್ದಿ ಮಾಹಿತಿ, ಚಿತ್ರಗಳ ಹಕ್ಕುಗಳು ಸ್ಪಷ್ಟವಾಗಿ ಉಲ್ಲೇಖಿಸಿರದಿದ್ದರೆ ಅದು ಸುಗಮ ಕನ್ನಡ ಕೂಟಕ್ಕೆ ಸೇರಿದೆ.
ಸಂಚಿಕೆಯಲ್ಲಿ ಬಳಸಿದ ಹಲವು ಚಿತ್ರಗಳು ಅಂತರ್ಜಾಲದಿಂದ ಪಡೆದದ್ದು. ಅದರ ಎಲ್ಲ ಹಕ್ಕೂ ಅದರದರ ಕರ್ತೃಗಳಿಗೆ ಸೇರಿದ್ದು.